# ಕರುನಾಡ ಸೊಗಡು

(1)



https://honalu.net

# ಮುನ್ನುಡಿ

ಕರ್ನಾಟಕವು ಹಲತನಗಳ ತವರೂರು. ಹಬ್ಬಗಳು, ಜಾತ್ರೆಗಳು, ಪೂಜೆ, ಜಾನಪದ ಆಚರಣೆಗಳು, ಸಾಂಪ್ರಾದಾಯಿಕ ಆಟೋಟಗಳು, ಬುಡಕಟ್ಟಿನ ಆಚರಣೆಗಳು - ಹೀಗೆ ಬರೆಯುತ್ತಾ ಹೋದರೆ ಪುಟಗಳೇ ಸಾಲದು. ಒಂದೊಂದು ಊರು ಒಂದೊಂದು ಬಗೆಯ ನಡೆ-ನುಡಿಗೆ ಹೆಸರು. ನಮ್ಮ ಸೊಗಡಿನ ನಡೆ-ನುಡಿಯನ್ನು ಸಾರುವ ಹಲವಾರು ಬರಹಗಳು ಹೊನಲಿನಲ್ಲಿ ಮೂಡಿಬಂದಿವೆ. ಅಂತಹ ಹಲವು ಬರಹಗಳನ್ನು ಆರಿಸಿ ಮಿನ್ನೋದುಗೆಯ ರೂಪದಲ್ಲಿ ಹೊರತರಲಾಗುತ್ತಿದೆ. ನಮ್ಮ ನಾಡಿನ ಹಲತನವನ್ನು ಈ ಮಿನ್ನೋದುಗೆಯಲ್ಲಿ ಸೆರೆ ಹಿಡಿಯಲಾಗಿದ್ದು, ಮಿನ್ನೋದುಗೆಯ ಮೊದಲನೆಯ ಕಂತನ್ನು ಓದುಗರ ಮಂದೆ ಇಡುತ್ತಿದ್ದೇವೆ. ಓದಿ, ನಿಮ್ಮ ಗೆಳೆತಿಯರು, ಗೆಳೆಯರು ಹಾಗು ನೆಂಟರೊಂದಿಗೆ ಹಂಚಿಕೊಳ್ಳಿ.

**- ಹೊನಲು ತಂಡ**

# ತಿಳಿಸುವಿಕೆ:

ಈ ಹೊತ್ತಗೆಯಲ್ಲಿರುವ ಎಲ್ಲಾ ಬರಹಗಳ ಹಕ್ಕುಗಳು ಬರಹಗಾರರು ಮತ್ತು ಹೊನಲು ತಂಡಕ್ಕೆ ಸೇರಿವೆ. ಬರಹಗಳ ಆಯ್ದ ಬಾಗವನ್ನು ಇಲ್ಲವೇ ಇಡೀ ಬರಹವನ್ನು ಬೇರೆ ಕಡೆ ಬಳಸಿಕೊಳ್ಳಲು ಬಯಸುವವರು ಬರಹದಲ್ಲಿ ಇಲ್ಲವೇ ಲಿಪಿಯಲ್ಲಿ ಯಾವುದೇ ಮಾರ್‍ಪಾಡುಗಳನ್ನು ಮಾಡದೇ, ಬರಹಗಾರರ ಹೆಸರನ್ನು ಮತ್ತು ಹೊನಲು ಮಿಂಬಾಗಿಲಿನಿಂದ (**honalu.net**) ಪಡೆದುಕೊಳ್ಳಲಾಗಿದೆ ಎಂದು ತಿಳಿಸುತ್ತಾ ಬಳಸಿಕೊಳ್ಳಬಹುದು. ಬರಹಗಳಲ್ಲಿ ಬಳಸಿರುವ ಚಿತ್ರಗಳ ಸೆಲೆಗಳನ್ನು ಆಯಾ ಬರಹದ ಕೆಳಗಡೆ ಕೊಡಲಾಗಿದ್ದು, ಅವುಗಳ ಹಕ್ಕುಗಳು ಆ ಸೆಲೆಗಳದ್ದಾಗಿರುತ್ತದೆ.

**ಮುಂಪುಟ ಕಟ್ಟಣೆ** **:** ರತೀಶ ರತ್ನಾಕರ

**ಹೊರಹೊಮ್ಮಿಕೆ** **:** 28.07.2016

**ಮಿಂಬಲೆಯ ವಿಳಾಸ** : https://honalu.net/

**ಮಿಂಚೆ** : minche@honalu.net

# ಒಳನೋಟ


ಕಣ್ಣೆರಡು ಸಾಲದು ‘ಶಿರಸಿ ಶ್ರೀ ಮಾರಿಕಾಂಬಾ ದೇವಿ’ಯ ಜಾತ್ರೆ ನೋಡಲು ........ 5
‘ಚೆರಗ ಚೆಲ್ಲೂದು’ ಅಂದ್ರೇನು ಗೊತ್ತಾ? ........ 10
ನೋಡಬನ್ನಿ ಕಲಬುರಗಿ ಶ್ರೀ ಶರಣಬಸವೇಶ್ವರ ಜಾತ್ರೆಯ ಸೊಬಗ! ........ 13
ವಿಜಾಪುರದಲ್ಲಿ ಸುಗ್ಗಿ ಹಬ್ಬಕ್ಕೆ ಸಿದ್ದೇಶ್ವರ ಜಾತ್ರೆ ಸಂಬ್ರಮ ........ 16
ಎಲ್ಲರ ತಾಯಿ ಯಲ್ಲಮ್ಮ ........ 18
ಸುಗ್ಗಿಯ ಹಿಗ್ಗಿನ ಸಂಕ್ರಾಂತಿ ........ 24
ಬುಡಕಟ್ಟು ನಡೆಯ ಕುರುಹು – ಮಾರ್ಲಮಿ ಹಬ್ಬ ........ 28
ಬೂತಕೋಲ: ಕರಾವಳಿಯ ವಿಶಿಶ್ಟ ನಡೆ-ನುಡಿ ........ 30
ಯಕ್ಶಗಾನ – ಕರುನಾಡ ಸಿರಿಕಲೆ ........ 34
ಕರುನಾಡ ಕಲೆ ಕಂಬಳ(ಕಂಬುಲ) ........ 39

# ಕಣ್ಣೆರಡು ಸಾಲದು 'ಶಿರಸಿ ಶ್ರೀ ಮಾರಿಕಾಂಬಾ ದೇವಿ'ಯ ಜಾತ್ರೆ ನೋಡಲು

- ಕಲ್ಪನಾ ಹೆಗಡೆ.




ಶಿರಸಿ, ಕರ್ನಾಟಕ ರಾಜ್ಯದ ಉತ್ತರಕನ್ನಡ ಜಿಲ್ಲೆಯಲ್ಲಿಯ ಪ್ರಮುಕ ಪಟ್ಟಣ. ಶಿರಸಿಯಲ್ಲಿ ನೆಲೆನಿಂತಿರುವ **ಶ್ರೀ ಮಾರಿಕಾಂಬಾದೇವಿ**ಅತ್ಯಂತ ಜಾಗ್ರುತ ಶಕ್ತಿ ದೇವತೆಯೆಂದು ಪ್ರಸಿದ್ದಳು. ಕರ್ನಾಟಕದಲ್ಲಿರುವ ದೇವಿಯ ಪವಿತ್ರ ಪೀಟಗಳಲ್ಲಿ ಶಿರಸಿಯ ಶ್ರೀಮಾರಿಕಾಂಬೆಯೂ ಒಂದು. ನಮ್ಮ ನಾಡಿನಲ್ಲಿ ಅಶ್ಟೇ ಅಲ್ಲ, ನೆರೆ ರಾಜ್ಯಗಳಾದ ಕೇರಳ, ಆಂದ್ರ, ತಮಿಳುನಾಡು, ಗೋವಾ, ಮಹಾರಾಶ್ಟ್ರಗಳಲ್ಲಿ ಶಿರಸಿಯ ಶ್ರೀಮಾರಿಕಾಂಬೆಯ ಬಕ್ತರು ಅಪಾರ ಸಂಕ್ಯೆಯಲ್ಲಿ ಇದ್ದಾರೆ. ಅದರಲ್ಲಿಯೂ ಉತ್ತರಕನ್ನಡ, ದಕ್ಶಿಣಕನ್ನಡ, ಉಡುಪಿ ಜಿಲ್ಲೆಗಳ ಜನರಿಗಂತೂ ಶ್ರೀಮಾರಿಕಾಂಬೆ ಮುಕ್ಯ ಆರಾದ್ಯ ದೇವತೆ.

ಶಕ್ತಿ ಕ್ಶೇತ್ರಗಳನ್ನು ಹೆಚ್ಚಾಗಿ ಗಿರಿ ಪ್ರದೇಶಗಳಲ್ಲಿ ಕಾಣುತ್ತೇವೆ. ಪಾರ್ವತಿಯನ್ನು ಹಿಮಾಲಯದಲ್ಲಿಯೂ, ವೈಶ್ಣವಿಯನ್ನು ವಿಂದ್ಯಾಗಿರಿಯ ಮೇಲೆಯೂ, ಬ್ರಮರಾಂಬೆಯನ್ನು ಶ್ರೀಶೈಲದಲ್ಲಿಯೂ, ಶಾರದಾಂಬೆಯನ್ನು ಶ್ರಿಂಗೇರಿಯಲ್ಲಿಯೂ, ಕೊಲ್ಲೂರಿನಲ್ಲಿ ಮೂಕಾಂಬಿಕೆಯರನ್ನೂ ಉದಾಹರಿಸಬಹುದು. ಶಿರಸಿಯ ಶ್ರೀಮಾರಿಕಾಂಬೆಯು ಸಹ ಗಿರಿಶಿಕರ ನಿವಾಸಿನಿ. ಶಿರಸಿಯ ಶ್ರೀಮಾರಿಕಾಂಬೆ ಮಾರಿಯಾಗಿ, ಮಾರೆಮ್ಮಳಾಗಿ, ಮಹಾಕಾಳಿಯಾಗಿ, ಮಹಾಲಕ್ಶ್ಮಿಯಾಗಿ, ಮಹಾ ಸರಸ್ವತೀಯಾಗಿ ಸಕಲರನ್ನೂ ಕಾಯುವ ಮಹಾ ಶಕ್ತಿಯಾಗಿ

ನೆಲೆಸಿರುವವಳು. ಮನುಕುಲದ ತಾಯಿಬಕ್ತಿಗೆ ಸರಿಸಾಟಿಯಾದುದು ಬೇರೆಯಾವುದೂ ಇಲ್ಲ. ನಮಗೆ ತಾಯಿಯೇ ದೇವರು. ದೇವರೇ ತಾಯಿ. ತಾಯಿ ದೇವರೆಂದು ಪೂಜಿಸುವುದು ಪ್ರಾಚೀನಕಾಲದಿಂದಲೂ ಬಂದಿರುವ ಸಂಪ್ರದಾಯ.

ನಮ್ಮ ಹಿರಿಯರು ಹೇಳುವ ಪ್ರಕಾರ ಆ ಕಾಲದಲ್ಲಿ ದೇಶದ ತುಂಬೆಲ್ಲ ತುಂಡು ಪಾಳೆಯಗಾರಿಕೆಗಳೇ ರೂಡಿಯಲ್ಲಿದ್ದುದರಿಂದ ಕಳವು, ಕೊಲೆ, ಸುಲಿಗೆಗಳು ಸಾಮಾನ್ಯವೆನಿಸಿಬಿಟ್ಟಿದ್ದವು. ಶಿರಸಿ ಆಗ ಚೆನ್ನಾಪುರ ಸೀಮೆಯಲ್ಲಿದ್ದ ಸುಮಾರು ಇನ್ನೂರು ಮನೆಗಳುಳ್ಳ ಒಂದು ಪುಟ್ಟಹಳ್ಳಿ. ಆಗ ಹಾನಗಲ್ಲಿನಲ್ಲಿ ದೇವಿಯ ಜಾತ್ರೆ ಅದ್ದೂರಿಯಾಗಿ ನಡಿತಾ ಇತ್ತಂತೆ. ಜಾತ್ರೆ ಮುಗಿದ ಮೇಲೆ ದೇವಿಯ ವಿಗ್ರಹದ ವಿವಿದ ಬಾಗಗಳನ್ನು ಪೆಟ್ಟಿಗೆಯಲ್ಲಿ ಹಾಕಿ ಇಡಲಾಗಿತ್ತಂತೆ ಅದರ ಜೊತೆಗೆ ಆಬರಣಗಳನ್ನೂ ಇಡ್ತಾ ಇದ್ದರಂತೆ. ಕಳ್ಳರು ಹಾನಗಲ್ಲಿನಿಂದ ಈ ದೇವಿಯ ವಿಗ್ರಹದ ಪೆಟ್ಟಿಗೆಯನ್ನು ಕದ್ದುತಂದು, ಶಿರಸಿಗೆ ಸಮೀಪದ ಕೆರೆಯಿಂದ ಸ್ವಲ್ಪ ದೂರದಲ್ಲಿ ಕುಳಿತು ಪೆಟ್ಟಿಗೆಯನ್ನೊಡೆದು, ಅದರಲ್ಲಿನ ಆಬರಣಗಳನ್ನು ತಮ್ಮೊಳಗೆ ಹಂಚಿಕೊಂಡು, ವಿಗ್ರಹದ ಬಿಡಿ ಬಾಗಗಳನ್ನು ಮತ್ತದೇ ಪೆಟ್ಟಿಗೆಯಲ್ಲಿ ತುಂಬಿ ಶಿರಸಿಯ ಸಮೀಪದ ಕೋಟೆಕೆರೆಯೊಳಗೆ ಎಸೆದರು ಎಂಬುದಾಗಿ ಇತಿಹಾಸ ಇದೆ. ಬೇರೆ ಸ್ತಳದಿಂದ ಶಿರಸಿಗೆ ಬಂದು, ಕೆರೆಯಲ್ಲಿ ದೊರೆತ ವಿಗ್ರಹ ಮಾರಿಯಾಗಿ, ಮಾರೆಮ್ಮನಾಗಿ ಶಿರಸಿಯಲ್ಲಿ ಪ್ರಕಟಗೊಂಡಳು. ಆನಂತರ ಶ್ರೀ ಶಾಲಿವಾಹನ ಶಕೆ 1611 ಶುಕ್ಲ ಸಂವತ್ಸರದ ವೈಶಾಕ ಶುದ್ದ ಅಶ್ಟಮಿ ಮಂಗಳವಾರದಂದು ಈಗಿರುವ ಮಾರಿಕಾಂಬಾ ದೇವಾಲಯದ ಸ್ತಳದಲ್ಲಿ ದೇವಿಯನ್ನು ಪ್ರತಿಶ್ಟಾಪಿಸಲಾಯಿತಂತೆ. ಮಾರಿಕಾಂಬಾ ದೇವಾಲಯ ಇಂದು ಪ್ರಸಿದ್ದ ದಾರ್ಮಿಕ ಶಕ್ತಿ ಕೇಂದ್ರವಾಗಿರುವದರೊಂದಿಗೆ ನಾಡಿನ ಹೆಸರಾಂತ ಪ್ರೇಕ್ಶಣೀಯ ಸ್ತಳವಾಗಿ ಹೆಸರು ಗಳಿಸಿದೆ.

**ಮಾರಮ್ಮನ ಜಾತ್ರೆ:**



ಶಿರಸಿಯ ಶ್ರೀಮಾರಿಕಾಂಬಾ ದೇವಿಯಜಾತ್ರೆ ಕರ್ನಾಟಕಲ್ಲಿಯೇ ಅತಿ ಪ್ರಸಿದ್ಧವಾದ ಜಾತ್ರೆಗಳಲ್ಲಿ ಒಂದು. ಮಾರಿಕಾಂಬಾದೇವಿಯ ಜಾತ್ರೆ ಈಗಿನಂತೆ ನಿಯಮಿತ ಅವದಿಗೆ ಸರಿಯಾಗಿ ಅಂದರೆ ಪ್ರತಿ ಎರಡು ವರುಶಗಳಿಗೊಮ್ಮೆ ಜಾತ್ರೆ ನಡಿಯತ್ತೆ. ಮಾರಿಜಾತ್ರೆಗೆಂದೇ ಮೀಸಲಾಗಿಟ್ಟ ಊರಮದ್ಯದ ಬೀಡಕಿ ಬೈಲಿನಲ್ಲಿ ಜಾತ್ರೆ ವೈಬವಯುತವಾಗಿ ನಡೆಯುತ್ತದೆ. ಜಾತ್ರೆ ಇನ್ನೂ ಎಂಟು ದಿನ ಇದೆ ಎನ್ನುವಾಗಲೇ ಶಿರಸಿಗೆ ಜನ ಬಂದು ಸೇರಲು ಆರಂಬವಾಗಿ ಬಿಡುತ್ತದೆ. ಒಂದು ವಾರಗಳ ಕಾಲ ನಡೆಯುವ ಈ ಇತಿಹಾಸ ಪ್ರಸಿದ್ಧವಾದ ಉತ್ಸವದಲ್ಲಿ ಊರೊಂದೇ ಅಲ್ಲ ದೂರದೂರದ ಊರುಗಳಿಂದ, ನೆರೆ ರಾಜ್ಯಗಳಿಂದ ಲಕ್ಶಾಂತರ ಬಕ್ತರು, ಪ್ರವಾಸಿಗರು ಆಗಮಿಸಿ, ಶ್ರೀದೇವಿಯ ದರ್ಶನ ಪಡೆದು ಹರಕೆಗಳನ್ನು ಒಪ್ಪಿಸಿ, ಸುಬೀಕ್ಶೆ, ಸುಕ, ಸಂತೋಶ, ಸೌಬಾಗ್ಯ ನೀಡುವಂತೆ ಪ್ರಾರ್ತಿಸುವ ದ್ರುಶ್ಯವನ್ನು ಬಣ್ಣಿಸಲಾಗದು.

ಕಂದಾಯ ಇಲಾಕೆ, ನಗರಸಬೆ, ಪೊಲೀಸ್ ಇಲಾಕೆ, ಆರೋಗ್ಯ ಇಲಾಕೆಗಳೇ ಮೊದಲಾದ ಸರಕಾರೀ ಇಲಾಕೆಗಳ ಪೂರ್ಣ ಸಹಕಾರ ಪಡೆದು ಶಾಂತಿಯುತವಾಗಿ, ಬಕ್ತಜನರಿಗೆ ಪ್ರವಾಸಿಗರಿಗೆ ಯಾವುದೇ ತೊಂದರೆಯಾಗದಂತೆ ಶ್ರೀ ದೇವಸ್ತಾನದ ಬಾಬದಾರರು ಹಾಗು ಸಹಾಯಕರು, ಊರ ನಾಗರಿಕರ ಸಹಕಾರದೊಂದಿಗೆ, ಸ್ವಯಂ ಸೇವಾ ಸಂಸ್ತೆಗಳ ನೆರವಿನಲ್ಲಿ, ಸ್ವಯಂ ಸೇವಕರ ಪೂರ್ತಿ ಸಹಕಾರದಲ್ಲಿ ಜಾತ್ರೆ ಅವಿಸ್ಮರಣೀಯವಾಗಿ ಜರುಗತ್ತದೆ. ವಿವಿದ ಬಗೆಯ ವ್ಯಾಪಾರಿ ಮಳಿಗೆಗಳು, ಮನರಂಜನೆಗಳು, ನಾಟಕ ಯಕ್ಶಗಾನಗಳೇ ಮೊದಲಾದ ಕಲಾಪ್ರಕಾರಗಳು ಜಾತ್ರೆಯಲ್ಲಿ ಬಾಗವಹಿಸಿ ಜಾತ್ರೆಯ ಸೊಬಗನ್ನು ಇಮ್ಮಡಿಸುತ್ತವೆ.

ಜಾತ್ರೆಯು ಪ್ರಾರಂಬವಾದ ಮೇಲೆ ಮೊದಲ ಮೂರು ಮಂಗಳವಾರ ಹಾಗೂ ನಡುವಿನ ಎರಡು ಶುಕ್ರವಾರಗಳಂದು ಐದು ಹೊರಬೀಡುಗಳು ನಡೆಯುತ್ತವೆ. ಹೊರಬೀಡುಗಳೆಂದರೆ ರಾತ್ರಿಗಡಿ ಗದ್ದುಗೆಗಳ ಬಳಿಗೆ ಹೋಗಿ ದೇವಿಯನ್ನು ಪೂಜಿಸಿ ತಿರುಗಿ ದೇವಸ್ತಾನಕ್ಕೆ ಬರುವುದು. ಜಾತ್ರೆಯ ನಿಯಮದಂತೆ ಹೊರಬೀಡುಗಳು ತುಂಬ ವಿಜ್ರಂಬಣೆಯಿಂದಲೇ ನಡೆಯುತ್ತವೆ. ಮೂರು ಮಂಗಳವಾರಗಳ ಹೊರಬೀಡಿನಲ್ಲಿಯೂ ಉತ್ಸವ ಮೂರ್ತಿಯನ್ನು ಪಲ್ಲಕ್ಕಿಯಲ್ಲಿ ಕೂಡ್ರಿಸಿಕೊಂಡು, ಮೆರವಣಿಗೆ ಪೂರ್ವ ದಿಕ್ಕಿನ ಗದ್ದಿಗೆಯ ಕಡೆಗೆ ಹೋಗುತ್ತದೆ. ಶುಕ್ರವಾರಗಳಂದು ಪಡಲಿಗೆಯೊಂದಿಗೆ ಮೆರವಣಿಗೆ ಉತ್ತರ ದಿಕ್ಕಿನ ಗಡಿಯ ನಿಶ್ಚಿತ ಗದ್ದಿಗೆಗೆ ಹೋಗುತ್ತದೆ ಹಾಗೂ ಅಲ್ಲೇ ದೇವತೆಗಳಿಗೆ ಉಡಿ ಸಮರ್ಪಣೆಯಾದ ನಂತರ ಮಾರಿಕಾಂಬಾ ದೇವಸ್ತಾನದಿಂದ ಮರ್ಕಿ-ದುರ್ಗಿದೇವಸ್ತಾನಕ್ಕೆ ಹೋಗುವವು.

ಐದನೇ ಹೊರಬೀಡು ಅಂದರೆ ಅಂಕೆಯ ಹೊರಬೀಡು. ಅಂದರೆ ಪಟ್ಟದಕೋಣನಿಗೆ ಕಂಕಣಕಟ್ಟುವ ಕಾರ್ಯಕ್ರಮ. ಹೊರಬೀಡಿನ ಮರುದಿವಸ, ಬುದವಾರ ಮಾರಿಕೋಣದ ಮೆರವಣಿಗೆ ಮರ್ಕಿ-ದುರ್ಗಿ ದೇವಸ್ತಾನಕ್ಕೆ ಹೋಗಿ ಪೂಜೆಯ ನಂತರ ಜಾತ್ರೆಯ ಗದ್ದಿಗೆಗೆ ತೆರಳಿ ನಿಲ್ಲುವುದು. ಅಲ್ಲಿ ಅಸಾದಿಯರು ಮತ್ತು ಮೇತ್ರಿಯವರು ರಂಗಮಂಟಪದ ವಿದಿ ವಿದಾನಗಳನ್ನು ಪೂರೈಸುವರು. ಇಲ್ಲಿ ಅಸಾದಿಯವರೇ ಕಂಕಣದೀಕ್ಶೆ ತೊಡುತ್ತಾರೆ. ಆ ದಿವಸ ಶ್ರೀದೇವಿಯ ಉತ್ಸವ ಮೂರ್ತಿಯಿದ್ದ ಪಲ್ಲಕ್ಕಿಯು ಜಾತ್ರೆ ಗದ್ದಿಗೆಯ ಮೇಲೆ ಕುಳಿತ ನಂತರ ಮೆರವಣಿಗೆಯಲ್ಲಿ ಹೋಗಿ ಮೇಟಿ ಬಾಬದಾರರಿಗೆ ಆಮಂತ್ರಣ ನೀಡಲಾಗುವುದು. ಆನಂತರ ಮೇಟಿಯವರು ಗಡಿಗೆ ಹಾಗೂ ಹಣತೆಯೊಂದಿಗೆ ಮೆರವಣಿಗೆಯಲ್ಲಿ ಜಾತ್ರೆಯ ಗದ್ದುಗೆಗೆ ಬಂದ ನಂತರ ನಾಡಿಗ ಮನೆತನದವರು ದೇವಿಗೆ ಮಂಗಳಾರತಿ ಮಾಡುತ್ತಾರೆ. ನಾಡಿಗ ಮನೆತನದವರು ದೇವಿಯ ತಂದೆಯ ಪರಂಪರೆಯವರೆಂದು ನಂಬಿಕೆಯಿದೆ. ನಾಡಿಗರು ಮಾಡಿದ ಮಂಗಳಾರತಿಯಿಂದ ಮೇಟಿ ದೀಪವನ್ನು ಹಚ್ಚುತ್ತಾರೆ. ಆ ದೀಪ ಜಾತ್ರೆ ಮುಗಿಯುವವರೆಗೂ ಆರದಂತೆ ಕಾಯ್ದುಕೊಳ್ಳಬೇಕಾದುದು ಮೇಟಿಯವರ ಕೆಲಸ.



ಶ್ರೀ ಮಾರಿಕಾಂಬಾದೇವಿ

ನಾಡಿನಾದ್ಯಂತ ಮನೆ ಮಾತಾಗಿರುವ ಶಿರಸಿಯ ಮಾರಿಕಾಂಬಾ ದೇವಿಯ ಜಾತ್ರೆ ಮಂಗಳವಾರ ಪ್ರಾರಂಬವಾಗುವುದು. ಅಂದು ಬೆಳಗ್ಗೆ ಕಲಶವನ್ನು ಪೂಜಿಸಿ ಅದನ್ನು ರತದ ಗೂಡಿನ ಮೇಲೆ ಸ್ತಾಪಿಸಲಾಗುವುದು. ಬೇಡರ ಜೋಗತಿಯರು ಆ ಸಂದರ್ಬದಲ್ಲಿ ಹಾಜರಿದ್ದು ಚವರಿ ಬೀಸುವರು. ರತವನ್ನು ತಳಿರು ತೋರಣಗಳಿಂದ ಸಿಂಗರಿಸಿ ಸರ್ವಾಲಂಕ್ರತಗೊಳಿಸುವರು. ಸಾಯಂಕಾಲ ಶ್ರೀಮಾರಿಕಾಂಬಾ ದೇವಿಯನ್ನು ಹಾಗೂ ಮರ್ಕಿ-ದುರ್ಗಿದೇವಿಯರನ್ನು ದೇವಸ್ತಾನದ ಸಬಾಮಂಟಪದ ಗದ್ದಿಗೆಯಲ್ಲಿ ಕೂಡಿಸುವರು. ಮಾರಿಕಾಂಬೆಗೆ ಮತ್ತು ಮರ್ಕಿ-ದುರ್ಗಿಯರಿಗೆ ಹೊಸ ಸೀರೆ ಉಡಿಸಿ ಬಂಗಾರದ ಆಬರಣಗಳನ್ನು ತೊಡಿಸಿ ಅಲಂಕರಿಸಿ ದ್ರುಶ್ಟಿಯಿಡುವರು. ಈ ವೇಳೆಯಲ್ಲಿ ಒಂದು ಬಲಿ ಸಮರ್ಪಿಸಲಾಗುವುದು. ಬಲಿಯೆಂದರೆ ಈಗ ಸಾತ್ವಿಕ ಬಲಿಗಳು ಮಾತ್ರ. ಜಾತ್ರೆ ಮುಗಿಯುವತನಕ ಇಂತಹ ಅನೇಕ ಬಲಿ ಸಮರ್ಪಣೆಯ ವಿದಿಗಳಿರುವುವಾದರೂ ಅವೆಲ್ಲವೂ ಸಾತ್ವಿಕ ಬಲಿಗಳೇ ಆಗಿವೆ. ಕರಿ ಕುಂಬಳಕಾಯಿ ಕಡಿದು ಬಲಿಯನ್ನು ಸಾಂಕೇತಿಕವಾಗಿ ಸಮರ್ಪಿಸುವರು. ರಕ್ತದ ಬಲಿ ದಾನಗಳು ಹಿಂದೆ ನಡಿತಾ ಇತ್ತಂತೆ. ಈಗ ರಕ್ತದ ಬಲಿ ಸಂಪೂರ್ಣವಾಗಿ ನಿಂತಿದೆ. ದೇವರಿಗಾಗಿ ಮಾಡಿದ ಮಂಗಳಸೂತ್ರವನ್ನು ಆ ರಾತ್ರಿ ಬಾಬದಾರರ ಮನೆಯಿಂದ ಮೆರವಣಿಗೆಯಲ್ಲಿ ತಂದು ನಂತರ ಮೊದಲ ಪ್ರತಿಶ್ಟೆಯ ಪೂಜೆಗಾಗಿ ನಾಡಿಗರಿಗೆ ಆಮಂತ್ರಣ ಕೊಡುವರು. ಅಂದು ಲಗ್ನ. ನಾಡಿಗರ ಮನೆಯಲ್ಲಿ ಅಂದು ಲಗ್ನದ ಸಿಹಿಯೂಟ ನಡೆಸುವ ಕ್ರಮವಿದೆ. ನಾಡಿಗರಿಂದ ಮೊದಲ ಪೂಜೆ ನಡೆದ ಮೇಲೆ ಮುಂದೆ ಎರಡು, ಮೂರು ಹಾಗೂ ನಾಲ್ಕನೆಯ ಪೂಜೆಗಳು ಕ್ರಮವಾಗಿ ಕುಂಬಾರ, ಕೇದಾರಿ ಹಾಗೂ ಎರಡೂ ಮನೆತನಗಳ ಪೂಜಾರಿಗಳಿಂದ ನಡೆಯುವುದು.

ಮನಮೋಹಕವಾದ ಶ್ರೀ ಮಾರಿಕಾಂಬಾದೇವಿಯ ಬವ್ಯ ವಿಗ್ರಹವನ್ನು ರತದ ಮೇಲೆ ಕೂಡಿಸಿ, ಬಲಿ ಸಮರ್ಪಣೆ ಮಾಡಿ, ರತದ ಗಾಲಿಗಳಿಗೆ ಪ್ರತಿಶ್ಟಿತರು ಹಾಗೂ ಬಾಬುದಾರರು ಕಾಯಿ ಒಡೆಯುತ್ತಾರೆ. ಆಮೇಲೆ ರತವನ್ನೆಳೆಯಲು ಪ್ರಾರಂಬಿಸುವರು. ಅದೊಂದು ಅಮ್ರುತ ಗಳಿಗೆ. ಬುದವಾರ ಬೆಳಗಿನ ಮಂಗಳಮಯ ವಾತಾವರಣದಲ್ಲಿ ಶುಬ ಮುಹೂರ್ತದಲ್ಲಿ ರತದ ಮೇಲೆ ಸುಪ್ರತಿಶ್ಟಳಾದ ಅಂಬೆ ಮಾರಿಕಾಂಬೆ ನೋಡಲು ಬಲು ಚಂದ. ಲಕ್ಶ್ಯಾಂತರ ಜನರ ನಡುವೆ ಸಕಲ ವಾದ್ಯಮೇಳ, ಹಾಡು ಕುಣಿತಗಳ ವಿಶೇಶದೊಂದಿಗೆ ಗಂಬೀರವಾಗಿ ಬೀದಿಯಲ್ಲಿ ಸಾಗಿಬರುವ ದೇವಿಯ ರತವನ್ನು ನೋಡಲು ಕಂಗಳೆರಡೂ ಸಾಲದು. ಅದನ್ನು ವೀಕ್ಶಿಸುವುದೇ ಒಂದು ಮಹಾಬಾಗ್ಯ. ಶ್ರೀ ಮಾರಿಕಾಂಬಾದೇವಿಯನ್ನು ರತದ ಮೇಲಿಂದ ಇಳಿಸಿ ಜಾತ್ರೆಯ ಗದ್ದಿಗೆಯ ಮೇಲೆ ಕೂಡಿಸಲಾಗುತ್ತದೆ. ಜಾತ್ರೆ ಪ್ರಾರಂಬವಾಗಿ ಎಂಟು ದಿನಗಳ ಕಾಲ ಜಾತ್ರೆಯ ಗದ್ದಿಗೆಯಲ್ಲಿ ಕುಳಿತು ಬಕ್ತರಿಗೆ ದರ್ಶನ ನೀಡಿದ ಮಹಾತಾಯಿ ಮಾರೆಮ್ಮನ ಜಾತ್ರೆ

ಅದೇ ಮರು ಬುದವಾರ ಮುಕ್ತಾಯಗೊಳ್ಳುತ್ತದೆ. ವಿವಿದ ಬಗೆಯ ವ್ಯಾಪಾರಿ ಮಳಿಗೆಗಳು, ಮನರಂಜನೆಗಳು, ನಾಟಕ, ಯಕ್ಶಗಾನಗಳು, ನಾನಾ ರೀತಿಯ ಮನರಂಜಿಸುವ ಆಟಗಳು ಜಾತ್ರೆಯ ಸೊಬಗನ್ನು ಹೆಚ್ಚಿಸುತ್ತವೆ. ದಿನಾಲೂ ಹೊರ ಊರುಗಳಿಂದ ಲಕ್ಶ ಲಕ್ಶಾಂತರ ಜನರು ಬಂದು ಜಾತ್ರೆಯ ಸಂಬ್ರಮದಲ್ಲಿ ತೊಡಗಿ ಆನಂದಿಸುತ್ತಾರೆ. ಎಂದಿನಂತೆ ಈ ವರ‍್ಶ (2016) ಜಾತ್ರೆ ನಡೆಯತ್ತೆ. ಇದೇ ಬರುವ ಮುಂದಿನ ತಿಂಗಳು ಮಾರ‍್ಚ್ 22 ರಿಂದ 29 ರವರೆಗೆ.

*(ಚಿತ್ರ ಸೆಲೆ: sirsimarikamba.com)*

# ‘ಚೆರಗ ಚೆಲ್ಲೂದು’ ಅಂದ್ರೇನು ಗೊತ್ತಾ?

- **[ರೂಪಾ ಪಾಟೀಲ್](#).**



‘ಎಳ್ಳಮವಾಸಿ’ ಅಂದ್ರ ಎಳ್ಳ ಕಾಳಶ್ಟು ಬಿಸಿಲು ಬಂತು ಅಂತ ನಮ್ ಅಜ್ಜಿ-ಅವ್ವಂದಿರು ಹೇಳ್ತಿದ್ರು. ಈ ಎಳ್ಳಮವಾಸಿ ಬ್ಯಾಸಿಗಿ ದಿವಸ ಕಾಲಿಡೋ ಮುನ್ನೆಚ್ಚರಿಕೆ ಕರೆಗಂಟೆ ಅಂತ ಹೇಳಬಹುದು. ಈ ಹಬ್ಬಾನ ಉತ್ತರ ಕರ್‍ನಾಟಕದ ಹಳ್ಳಿಗಳ ಕಡೆ ಬಾಳ ಕುಶಿ, ಸಡಗರದಿಂದ ಆಚರಣೆ ಮಾಡ್ತಾರ. ರೈತರು ತಮ್ಮ ಹೊಲದಾಗ ಬೆಳೆದ ಬೆಳೆಗಳಿಗೆ **ಹೊಡಿಗಿ ಪೂಜಿ** ಮಾಡ್ತಾರ ಮತ್ತ ನೈವೇದ್ಯ ಮಾಡಿ ಚೆರಗ ಚೆಲ್ತಾರ.

ಎಳ್ಳಮವಾಸಿ ಹಬ್ಬ ಇನ್ನು ಒಂದ್ ದಿನ ಇರ್‍ಲಿಕ್ ಮೊದ್ಲ ಕಾಯಿಪಲ್ಲೆ ಸೋಸು ದಿನ ಅಂತ ಮಾಡ್ತಾರ. ಕಾಯಿಪಲ್ಲೆ ಸೋಸು ದಿನ ಅಂದ್ರ ಹಬ್ಬದ ತಯಾರಿ ಅಂತ ಹೇಳಬಹುದು. ಈ ದಿನ ಹಬ್ಬಕ್ಕಂತ ಎಲ್ಲ ನಮೂನಿ ಕಾಯಿಪಲ್ಯೆ, ಕಾಳುಗಳನ್ನು ಹಸನು ಮಾಡು ಕೆಲಸ ಶುರು ಆಗ್ತದ. ಪುಂಡಿಪಲ್ಯೆ, ಮೆಂತೆಪಲ್ಯೆ, ಹುಂಚಿ(ಹುಣಸೆ)ಪಲ್ಯೆ, ಗಜ್ಜರಿ, ಸೌತಿಕಾಯಿ, ಬದನಿಕಾಯಿ, ಕುಂಬಳಕಾಯಿ, ಬಾರಿಕಾಯಿ, ಹೀರಿಕಾಯಿ ಒಂದಾ ಎರಡಾ… ಇಶ್ಟಲ್ಲದ ಕಾಳುಗಳ ಹಸನು ಮಾಡುದೂ ಅವತ್ತ. ಅವರಿಕಾಳು, ಅಲಸಂದಿ, ತೊಗರಿ, ಹೆಸರು, ಕಡಲಿ, ಮಡಕಿಕಾಳು ಹಿಂಗ ಎಲ್ಲಾ ತರದ ಕಾಳುಗಳನ್ನ ಹಸನು ಮಾಡ್ತಾರ. ಮನ್ಯಾಗಿನ ಎಲ್ಲಾ ಬಾಂಡೆ ತೊಳದು ಹಬ್ಬಕ್ಕ ಅಂತ ಹೊಸ ನೀರು ತುಂಬಿಸ್ಕೊತಾರ.

ಇದಾದ ಮಾರನೇ ದಿನಾನ ಎಳ್ಳಮವಾಸಿ ಹಬ್ಬ. ಹಬ್ಬದ ದಿನ ಹೊತ್ತು ಹುಟ್ಟುಕಿಂತ ಮೊದಲ ಲಗುನ(ಬೇಗ) ಎದ್ದು ಹಬ್ಬದ ಅಡುಗಿ ಕೆಲಸ ಚಾಲೂ ಮಾಡ್ತಾರ. ಬೂಮಿ ತಾಯಿಯ ಮಕ್ಕಳಂಗ ಇರೋ ಪಸಲಿಗೆ(ಬೆಳೆಗಳಿಗೆ) ಈ ಹಬ್ಬದ ಮೊದಲ ನೈವೇದ್ಯ. ಎಲ್ಲಾ ತರದ



ಕಾಯಿಪಲ್ಯೆ ಮತ್ತ ಕಾಳುಗಳನ್ನು ಸೇರಿಸಿ ಮಾಡೋ **ಗರಗಟದ ಪಲ್ಯೆ** ಎಳ್ಳಮವಾಸಿಯ ವಿಶೇಶ. ಗರಗಟದ ಪಲ್ಯೆದ ಜೊತೆ ಸಜ್ಜಿ ಕಡುಬು, ಶೇಂಗಾ ಚಟ್ನಿ, ಅಗಸಿ ಚಟ್ನಿ ರುಚಿ ಎಂತಾದ್ದು ಅಂತ ತಿಂದವರಿಗ ಗೊತ್ತು! ಇಶ್ಟ ಅಲ್ಲ, ಸಜ್ಜಿ ರೊಟ್ಟಿ, ಗಟ್ಟಿ ಮೊಸರು, ಶೇಂಗಾ ಹೋಳಿಗಿ ಈ ಹಬ್ಬಕ್ಕ ತಪ್ಪಿದ್ದಲ್ಲ. ನೈವೇದ್ಯಕ್ಕ ಕಡಲಿಬ್ಯಾಳಿ ಹೂರಣದ ಹೋಳಿಗಿನು ತಪ್ಪಂಗಿಲ್ಲ ನೋಡ್ರಿ.

ಬೆಳಬೆಳಿಗ್ಗೆ ಎದ್ದು ಮಾಡಿದ ಎಲ್ಲಾ ಅಡುಗಿ ಚೆರಗದ ಬುಟ್ಟಿಯೊಳಗ ಕಟ್ಟಕೊಂಡು ಎತ್ತಿನ ಬಂಡಿ ಹತ್ತಿ ಹೊಲಕ್ಕ ಹೋಗ್ತಾರ. ಹೊಲದಾಗ ಹೊಡಿಗಿ ಪೂಜಿ ಮಾಡ್ತಾರ. ಹೊಡಿಗಿ ಪೂಜಿ ಅಂದ್ರ ಹೊಲದಾಗ ಬೆಳೆದಿದ್ದ ಸಜ್ಜಿ, ಜೋಳ ಅತವಾ ಯಾವುದೇ ಬೆಳೆಯ ಅಯ್ದು ದಂಟು ಕೂಡಿಸಿ ನೂಲ ದಾರ ಸುತ್ತಿ, ಅದಕ್ಕ ಅರಿಶಿನ ಕುಂಕುಮ ಹಚ್ಚಿ ಪೂಜಿ ಮಾಡ್ತಾರ. ಅದಕ್ಕ ಮನ್ಯಾಗ ತಯಾರಿ ಮಾಡ್ಕೊಂಡ್ ಬಂದಿದ್ದ ನೈವೇದ್ಯ ಹಿಡಿತಾರ. ಹೋಳಿಗಿ, ಗರಗಟದ ಪಲ್ಯೆ ಕೂಡಿಸಿ ಕಲಸಿ ಹೊಲದ ಎಲ್ಲ ದಿಕ್ಕಿಗೂ ಚೆಲ್ಲುತ್ತಾ 'ಚೋಂಗೆಬಲೋ' ಅಂತ ಕೂಗ್ತಾರ. ಇದನ್ನ ಚೆರಗ ಚೆಲ್ಲುದು ಅಂತ ಹೇಳ್ತಾರ. ಅನ್ನದಾತ ತನಗ ಅನ್ನ ನೀಡುವ ಬೂಮಿ ತಾಯಿಗೆ ಚೆರಗ ಚೆಲ್ಲುವ ಮೂಲಕ ಬೂತಾಯಿಗೆ ಚೆರಗದ ನೈವೇದ್ಯ ನೀಡ್ತಾನ.

ಈ ಹಬ್ಬದ ಇನ್ನೊಂದ್ ಅತಿ ವಿಶೇಶ ಅಂದ್ರ ತೆಪ್ಪ. ಅದಕ್ಕ ಕೆಲವು ಕಡೆ ಬಾಗಿನ ಕೊಡೂದು ಅಂತಾನೂ ಕರೀತಾರ. ಸಣ್ಣ ಸಣ್ಣ ಕಟಿಗಿ ತಗೊಂಡು, ಅವನ್ನ ಕಟ್ಟಿ, ಚೌಕಾಕಾರದ ತೆಪ್ಪ ಮಾಡ್ತಾರ. ತೆಪ್ಪಕ್ಕ ಜೋಳದ ಒಣಗಿದ ದಂಟು ಬಳಸೂದು ಸಾಮಾನ್ಯ. ತೆಪ್ಪದ ಮ್ಯಾಲೆ ಒಂದು ಹೋಳಿಗಿ ಇಟ್ಟು, ಅದರ ಮ್ಯಾಲೆ ಒಂದು ಸಣ್ಣ ಹಿಟ್ಟಿನ ದೀಪ ಮತ್ತ ಹಿಟ್ಟಿನ ಮುಟಿಗಿ ಮಾಡಿ ಇಡ್ತಾರ. ದೀಪ ಹಚ್ಚಿ, ಪೂಜಿ ಮಾಡಿ ಅದನ್ನ ಬಾವಿ ಅತವಾ ಕೆರೆಯಾಗ ತೇಲಿ ಬಿಡ್ತಾರ. ಅನ್ನದಾತನ ಬೆಳೆಗಳಿಗೆ ನೀರುಣಿಸುವ ಬಾವಿ, ಕೆರೆಗಳ ಉಪಕಾರಾನ ತೆಪ್ಪದ ಮೂಲಕ ವಿಶೇಶವಾಗಿ ನೆನೆಸುವ ರೀತಿ ಇದು. ಉತ್ತರ ಕರ್ನಾಟಕದ ಹಲೆವೆಡೆ ಹೊಲದಾಗ ದೇವರು ಇರೂದು ಸಾಮಾನ್ಯ. ಅಲ್ಲಿ ಗುಡಿ ಗುಂಡಾರ ಇರೂದಿಲ್ಲ, ಮರದ ಕೆಳಗ ದೇವರ ವಾಸ. ಒಂದು ಕಲ್ಲನ್ನ ದೇವರನ್ನಾಗಿಸಿ ಇಟ್ಟು ಪೂಜಿ ಮಾಡೂದ ಬಹಳ ಸಾಮಾನ್ಯ. ಇಂತಾ ದೇವರುಗಳ ತಮ್ಮ ಹೊಲ-ಗದ್ದಿ ಕಾಯ್ತಾರ ಅಂತ ನಂಬ್ಯಾರ ನಮ್ಮ ರೈತಾಪಿ ಮಂದಿ. ಇಂತಾ ದೇವರುಗಳಿಗೆ ಎಳ್ಳಮವಾಸಿ ದಿನ ಅಶ್ಟ ಅಲ್ಲ ಯಾವುದ ಹಬ್ಬ ಹರಿದಿನ ಆದರೂ ನೈವೇದ್ಯ ತಪ್ಪಂಗಿಲ್ಲ.

ಎಲ್ಲಾ ದೇವರುಗಳ ಪೂಜಿ-ನೈವೇದ್ಯ ಮುಗಿದ ಮ್ಯಾಲೆ ಎಳ್ಳಮವಾಸಿ ಬರ್ಜರಿ ಊಟದ ಹೊತ್ತು. ಹೊಲದಾಗ ಕುಂತು ಮನಿಯವರೆಲ್ಲ ಸೇರಿ ಊಟ ಮಾಡ್ತಾರ. ಹೊತ್ತು ಮುಳುಗು ಮೊದಲ ಊರ ಕಡೆ ಹೊಂಟ್ ನಿಲ್ತಾರ. ಮನಿಗೆ ಬರುವಾಗ ಬೆಳೆಯ ಕೆಲ ದಂಟು ಕಿತ್ತು ಚೆರಗದ ಬುಟ್ಟಿಯೊಳಗಿಟ್ಟು ಮನಿಗೆ ತೊಗೊಂಡ್ ಹೋಗ್ತಾರ. ಅದನ್ನ ಮನಿಯೊಳಗಿನ ದೇವರ ಮುಂದ, ಮನಿ ಬಾಗಿಲ ಮುಂದ ಇಟ್ಟು ಪೂಜಿ ಮಾಡ್ತಾರ. ಕೆಲವು ಕಡೆ ಅದನ್ನ ಊರ ದೇವರಿಗೆ ಸಲ್ಲಿಸಿ, ಎತ್ತಿನ ಬಂಡಿವೊಳಗ ಇಟ್ಟು ಊರಾಗ ಮೆರವಣಿಗಿ ಮಾಡ್ತಾರ.

**ಎಳ್ಳಮವಾಸಿ ವಿಶೇಶ ಅಡುಗೆಗಳು:**

**ಗರಗಟದ ಪಲ್ಯೆ** - ಎಲ್ಲಾ ತರದ ಕಾಳುಗಳನ್ನ ಸಮನಾಗಿ ತೊಗೊಂಡು ಕುದಿ ಹಾಕಬೇಕು. ಆಮ್ಯಾಲೆ ಎಲ್ಲಾ ರೀತಿಯ ಕಾಯಿಪಲ್ಯೆ ಹೆಚ್ಚಿ ಕುದಿತಿರೋ ಕಾಳು ಜೊತೆ ಸೇರಿಸಿ ಅರ್ದ ತಾಸು ಕುದಿಸಬೇಕು. ತುಸು ಎಣ್ಣಿ, ಸಾಸವಿ, ಜೀರಗಿ, ಶೇಂಗಾಕಾಳು, ಕರಿಬೇವು, ಬಳ್ಳೊಳ್ಳಿ ಸೇರಿಸಿ ಒಗ್ಗರಣಿ ಮಾಡಬೇಕು . ಕುದಿಸಿದ ಕಾಳು, ಕಾಯಿಪಲ್ಯೆಗೆ ಒಗ್ಗರಣಿ ಸೇರಿಸಿದರ ಗರಗಟದ ಪಲ್ಯೆ ತಯಾರು. ಇದನ್ನ ಬ್ಯಾರೆ ಕಡೆ ಬ್ಯಾರೆ ತರಾ ಮಾಡೂ ರೂಡಿನೂ ಐತಿ. ಗರಗಟದ ಪಲ್ಯಾನ ಸೊಪ್ಪಿನ ಪಲ್ಯೆ ಎಂದೂ ಹೇಳ್ತಾರ.

**ಸಜ್ಜಿ ಕಡುಬು** - ಸಜ್ಜಿ ಹಿಟ್ಟಿಗೆ ತುಸು ಉಪ್ಪು ಸೇರಿಸಿ ಹದಕ್ಕ ಕಲಸಿಟ್ಟು ಒಂದು ಅರ್ಧ ತಾಸು ಬಿಡಬೇಕು. ಅದನ್ನ ಲಿಂಬೆ ಹಣ್ಣಿನ ಅಳತೆಯ ಉಂಡೆ ಮಾಡಿ ನೀರಿನ ಹಬೆಯ ಮ್ಯಾಲೆ ಕುದಿಸಬೇಕು. ಹಳ್ಯಾಗ ಒಂದು ಬೋಗುಣಿ(ಪಾತ್ರೆ)ಯ ತುಂಬಾ ಕಬ್ಬು ಅತವಾ ಜೋಳದ ರೌದಿ(ಎಲೆ) ಹಾಕಿ ನೀರು ಹಾಕಿ ಕುದಿಸ್ತಾರ, ಅದರ ಮ್ಯಾಲೆ ಕಡುಬುಗಳನ್ನು ಕುದಿಸೂದು ಸಾಮಾನ್ಯ. ಹಿಂಗ್ ಮಾಡಿದರ ಸಜ್ಜಿ ಕಡುಬು ತಯ್ಯಾರ್

***( ಚಿತ್ರ ಸೆಲೆ: prajavani.net, kannada.eenaduindia.com )***

# ನೋಡಬನ್ನಿ ಕಲಬುರಗಿ ಶ್ರೀ ಶರಣಬಸವೇಶ್ವರ ಜಾತ್ರೆಯ ಸೊಬಗ!

- **ನಾಗರಾಜ್ ಬದ್ರಾ.**



ನಾಡಿನ ದೊಡ್ಡ ಜಾತ್ರೆಗಳಲ್ಲಿ ಕಲಬುರಗಿಯ **ಶ್ರೀ ಶರಣಬಸವೇಶ್ವರ** ಜಾತ್ರೆಯು ಒಂದು. ನಾಡು-ಹೊರನಾಡುಗಳಿಂದ ಸಾವಿರಾರು ಮಂದಿಯನ್ನು ಸೆಳೆಯುವ ಈ ಜಾತ್ರೆಯ ವಿಶೇಶತೆ ಅಂದರೆ ಶರಣಬಸವೇಶ್ವರರ ರತೋತ್ಸವ. ದೀಪಾಲಂಕಾರದಿಂದ ಕೂಡಿರುವ ತೇರು, ಅದನ್ನು ಎಳೆಯಲು ಹಾತೊರೆಯುವ ಸಾವಿರಾರು ಕೈಗಳು, ಸಹಸ್ರಾರು ಬಕ್ತರ ಬಕ್ತಿ-ಬಾವದ ಅಲೆಗಳಲ್ಲಿ ಮೊಳಗುವ ಜಯಗೋಶಗಳು, ಈ ಅದ್ದೂರಿ ಜಾತ್ರೆಯನ್ನು ನೋಡಲು ಎರಡು ಕಣ್ಣುಗಳು ಸಾಲದು.

**ರತೋತ್ಸವದ ಹಿನ್ನೆಲೆ:**

ಕಲಬುರಗಿಯ ಮಹಾ ದಾಸೋಹಿ ಶ್ರೀ ಶರಣಬಸವೇಶ್ವರರ ಬಗ್ಗೆ ಈಗಾಗಲೇ **ಹಿಂದಿನ ಬರಹ** ಒಂದರಲ್ಲಿ ತಿಳಿಸಲಾಗಿದೆ. ಶರಣಬಸವೇಶ್ವರರು ದಿನಾಂಕ 11-03-1822, ಸೋಮವಾರದಂದು ಅನಾರೋಗ್ಯದಿಂದ ಲಿಂಗೈಕ್ಯರಾದರು. ಬಳಿಕ ಅವರ ಸಮಾದಿಯ ಮೇಲೆ ಗೋಪುರವನ್ನು ಕಟ್ಟಲಾಯಿತು. ಅದುವೇ ಇಂದಿನ ಕಲಬುರಗಿಯಲ್ಲಿನ ಪವಿತ್ರವಾದ ಶ್ರೀ ಶರಣಬಸವೇಶ್ವರ ದೇವಸ್ತಾನ. ಅವರ ದಾಸೋಹ ಪರಂಪರೆಯನ್ನು ಜನತೆಯ ಮನದಲ್ಲಿ ಹಸಿರಾಗಿ ಉಳಿಸಲು, ಅವರು ಲಿಂಗೈಕ್ಯರಾದ ದಿನದಂದು ಪ್ರತಿವರ್ಶವು ರತೋತ್ಸವವನ್ನು ನಡೆಸಲಾಗುತ್ತದೆ.

**ಜಾತ್ರೆಯ ವಿಶೇಶತೆ:**

ಸುಮಾರು 15 ದಿನಗಳ ಕಾಲ ನಡೆಯುವ ಜಾತ್ರೆಯಲ್ಲಿ ಮೊದಲ ದಿನದಂದು ಅಡ್ಡಪಲ್ಲಕಿ ಉತ್ಸವ ನಡೆಯುತ್ತದೆ. ಈ ಉತ್ಸವದಲ್ಲಿ ಶ್ರೀ ಶರಣಬಸವೇಶ್ವರರ ದಿವ್ಯಬಿಂಬಗಳಿರುವ ಅವಳಿ ವಿಗ್ರಹವನ್ನು ಅಡ್ಡಪಲ್ಲಕಿಯಲ್ಲಿ ಮೆರವಣಿಗೆ ಮಾಡಲಾಗುತ್ತದೆ. ಮೆರವಣಿಗೆಯಲ್ಲಿ ನಂದಿಕೋಲುಗಳ ಕುಣಿತ, ಡೊಳ್ಳು ಕುಣಿತ, ಜಾನಪದ ಕಲಾ ತಂಡಗಳ ಪ್ರದರ್ಶನ ಹಾಗೂ ಬಜನೆಯ ತಂಡದವರಿಂದ ಬಜನೆ ನಡೆಯುತ್ತದೆ. ಅಡ್ಡಪಲ್ಲಕಿಯಲ್ಲಿ ದೇವಸ್ತಾನದ ಸುತ್ತ 5 ಸುತ್ತುಗಳನ್ನು ಹಾಕಲಾಗುತ್ತದೆ. ಈ ಉತ್ಸವದಲ್ಲಿ ಸಾವಿರಾರು ಬಕ್ತರು ಶ್ರದ್ದೆಯಿಂದ ಪಾಲ್ಗೊಳ್ಳುತ್ತಾರೆ.

ಎರಡನೇ ದಿನ ಶ್ರೀ ಶರಣಬಸವೇಶ್ವರರ ರತೋತ್ಸವ ಕಾರ್ಯಕ್ರಮ ನಡೆಯುತ್ತದೆ. ಈ ದಿನದಂದು ಬೆಳಿಗ್ಗೆ ಶ್ರೀ ಶರಣಬಸವೇಶ್ವರರಿಗೆ ವಿಶೇಶವಾದ ಪೂಜೆ ಸಲ್ಲಿಸಲಾಗುತ್ತದೆ. ಸಂಜೆ ವೇಳೆ ರತೋತ್ಸವ ಕಾರ್ಯಕ್ರಮ ನಡೆಯುತ್ತದೆ. ಶರಣಬಸವೇಶ್ವರ ಸಂಸ್ತಾನದ ಪೀಟಾದಿಪತಿಗಳು ಪೂಜೆ ಸಲ್ಲಿಸುವ ಮೂಲಕ ರತೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡುತ್ತಾರೆ. ಸಾವಿರಾರು ಬಕ್ತರು ಜೈಗೋಶವನ್ನು ಹಾಕುತ್ತಾ ಬಕ್ತಿಯಿಂದ ತೇರು ಎಳೆಯುತ್ತಾರೆ. ತೇರು ಸಾಗುವ ಹಾದಿಯಲ್ಲಿ ಹೂವು-ಹಣ್ಣುಗಳನ್ನು ಮೇಲೆ ಹಾರಿಸುತ್ತ, ಜೈಗೋಶವನ್ನು ಮೊಳಗಿಸುತ್ತಾ ಬಕ್ತಿ ಬಾವದ ಅಲೆಯಲ್ಲಿ ಮೀಯುತ್ತಾರೆ. ಇದೇ ಸಂದರ್ಬದಲ್ಲಿ ವಿಶೇಶವಾಗಿ ಹಾರಿಸುವ ಪಟಾಕಿಗಳು ಆಕಾಶದಲ್ಲಿ ಮೂಡಿಸುವ ಬಣ್ಣದ ಚಿತ್ತಾರವು ನೋಡುಗರನ್ನು ಸೆಳೆಯುತ್ತದೆ. ಹೀಗೆ ಸಾಗುವ ತೇರು ಶರಣಬಸವೇಶ್ವರರ ದೇವಸ್ತಾನದ ಸಂಕೀರ್ಣದಲ್ಲಿ ಸುಮಾರು 100 ಮೀಟರ್ ದೂರದಲ್ಲಿರುವ ಬಸವಣ್ಣನ ಗುಡಿಯವರಿಗೂ ತಲುಪಿ ಮತ್ತೆ ದೇವಸ್ತಾನದ ಕಡೆಗೆ ಹಿಂತಿರುಗುತ್ತದೆ.



ಶರಣಬಸವೇಶ್ವರರ ಅವಳಿ ಬಿಂಬ

ಉಳಿದ ಹದಿಮೂರು ದಿನಗಳ ಕಾಲ ಜಾತ್ರೆಯ ಮೆರೆಗು ಹಾಗೆಯೇ ಇರುತ್ತದೆ. ಈ ಜಾತ್ರೆಗೆ ಕಲಬುರಗಿ ಜಿಲ್ಲೆಯಿಂದಲ್ಲದೇ ನೆರೆಯ ಜಿಲ್ಲೆಗಳಿಂದ ಹಾಗೂ ಹೊರ ನಾಡಿನಿಂದ ಹಲವಾರು ಬಕ್ತರು ಬಜನೆ ಮಾಡುತ್ತಾ ಕಾಲ್ನಡಿಗೆಯಲ್ಲಿ ಬರುತ್ತಾರೆ. ಅವರು ಬರುವ ದಾರಿಯಲ್ಲಿ ಸಿಗುವ ಊರುಗಳಲ್ಲಿ ಮಂದಿಯನ್ನು ಬೇಟಿಮಾಡಿ, ಶರಣಬಸವೇಶ್ವರರ ತತ್ವ ಸಿದ್ದಾಂತಗಳ ಬಗ್ಗೆ ಅರಿವು ಮೂಡಿಸುತ್ತಾ ಬರುತ್ತಾರೆ.

ಜಾತ್ರೆಗೆ ಬರುವ ಬಕ್ತರಿಗೆ ಅನ್ನ ದಾಸೋಹದ ಏರ್ಪಾಡನ್ನು ದೇವಸ್ತಾನದ ಕಡೆಯಿಂದ ಮಾಡಲಾಗಿರುತ್ತದೆ. ಇದ್ದಕ್ಕಾಗಿಯೇ ಬಕ್ತರು ತಾವು ಬೆಳೆದ ಬೆಳೆಗಳಲ್ಲಿ ಒಂದಿಶ್ಟು ಬಾಗವನ್ನು ಶರಣಬಸವೇಶ್ವರರ ದಾಸೋಹಕ್ಕೆ ನೀಡಿ, ಅವರ ದಾಸೋಹ ಕಾಯಕಕ್ಕೆ ಕೈಜೋಡಿಸಿ ಪುನೀತರಾಗುತ್ತಾರೆ.

ಜಾತ್ರೆಯ ಪ್ರತಿದಿನವೂ ದೇವಸ್ತಾನದ ಸಂಕೀರ‍್ಣದಲ್ಲಿರುವ ಅನುಬವ ಮಂಟಪದಲ್ಲಿ ವಿಶೇಶ ಉಪನ್ಯಾಸಕರಿಂದ ಶರಣಬಸವೇಶ್ವರರ ತತ್ವ ಸಿದ್ದಾಂತಗಳ ಕುರಿತು ಚರ‍್ಚೆ, ಮಾತುಗಳು ಹಾಗು ಇನ್ನಿತರ ಉಪನ್ಯಾಸ ಕಾರ‍್ಯಕ್ರಮಗಳು ನಡೆಯುತ್ತವೆ. ಇನ್ನೊಂದು ಕಡೆ ಹಲವಾರು ಊರುಗಳಿಂದ ಬಂದಿರುವ ಬಜನೆ ತಂಡಗಳಿಂದ ರಾತ್ರಿಯಿಡೀ ಶರಣಬಸವೇಶ್ವರರ ಬಜನೆ ಹಾಗೂ ಕೀರ‍್ತನೆಗಳು ನಡೆಯುತ್ತವೆ. ಜಾತ್ರೆಯಲ್ಲಿ ಸಿಹಿತಿಂಡಿ, ಬಳೆ, ಮಕ್ಕಳ ಆಟಿಕೆ ಹಾಗೂ ಇನ್ನೂ ಹಲವಾರು ಬಗೆಯ ಮಳಿಗೆಗಳನ್ನು ಹಾಕುತ್ತಾರೆ. ಇದರ ಜೊತೆಯಲ್ಲಿಯೇ ವಿವಿದ ಬಗೆಯ ಜೋಕಾಲಿಗಳು ಬರುತ್ತವೆ. ಎಲ್ಲವೂ ಸೇರಿ ಹದಿನೈದು ದಿನದ ಜಾತ್ರೆಯನ್ನು ಕಳೆಗಟ್ಟಿಸುತ್ತವೆ. ಇನ್ನು ಶರಣಬಸವೇಶ್ವರರ ಹುಟ್ಟಿದ ಊರು ಅರಳಗುಂಡಗಿಯಲ್ಲಿಯೂ ಇದೇ ಮಾದರಿಯಲ್ಲಿ 5 ದಿನಗಳ ಕಾಲ ಜಾತ್ರೆ ನಡೆಯುತ್ತದೆ.

***(ಚಿತ್ರಸೆಲೆ:** thehindu.com, youtube.com)*

# ವಿಜಾಪುರದಲ್ಲಿ ಸುಗ್ಗಿ ಹಬ್ಬಕ್ಕೆ ಸಿದ್ದೇಶ್ವರ ಜಾತ್ರೆ ಸಂಭ್ರಮ

- **ಜಯತೀರ್ಥ ನಾಡಗವ್ಡ.**



ಇದೇ 15ರಿಂದ ಬಡಗಣದ ಪ್ರಮುಕ ಜಿಲ್ಲೆ ವಿಜಾಪುರ ಊರಿನಲ್ಲಿ ಸಂಬ್ರಮ ಕಳೆಕಟ್ಟಿದೆ. ಸುಗ್ಗಿ ಹಬ್ಬ ಸಂಕ್ರಾಂತಿ ಹೊತ್ತಿನಲ್ಲಿ ವರುಶಕ್ಕೊಮ್ಮೆ **ಸಿದ್ದೇಶ್ವರ**ನ ಗುಡಿ ಜಾತ್ರೆ ವಿಜಾಪುರ ಊರಿನಲ್ಲಿ ನಡೆಯುತ್ತದೆ. ವಿಜಾಪುರ ಊರಿನ ನಡುಬಾಗದಲ್ಲಿ ಸಿದ್ದೇಶ್ವರ ದೇವಸ್ತಾನವಿದೆ. ಕನ್ನಡಿಗರು ಅಶ್ಟೇ ಅಲ್ಲದೇ ನೆರೆಯ ಮಹಾರಾಶ್ಟ್ರದ ಹಲವರು ಇಲ್ಲಿ ಪಾಲ್ಗೊಳ್ಳುತ್ತಾರೆ.
ಸಿದ್ದರಾಮ, ಸಿದ್ದರಾಮೇಶ್ವರ ಎಂಬ ಹೆಸರುಗಳಿಂದಲೂ ಸಿದ್ದೇಶ್ವರ ಹೆಸರುವಾಸಿ. ಸಿದ್ದರಾಮ **ಬಸವಣ್ಣ**ನವರ ನಡೆನುಡಿಗಳಲ್ಲಿ ಹೆಚ್ಚು ನಂಬಿಕೆಯುಳ್ಳ ಬಕ್ತನಾಗಿದ್ದ. ಸೊನ್ನಲಗಿ ಅಂದರೆ ಇಂದಿನ ಸೋಲಾಪುರದ ದೊರೆಯಾಗಿದ್ದವ ಸಿದ್ದರಾಮ, ಮುದ್ದಣ್ಣ ಮತ್ತು ಸುಗ್ಗಲಾದೇವಿಯವರ ಮಗನೆಂದು ತಿಳಿದುಬರುತ್ತದೆ. ಬಸವಣ್ಣವರ ನುಡಿಯಲ್ಲಿ ಬಲವಾದ ನಂಬಿಕೆ ಇಟ್ಟಿದ್ದ ಸಿದ್ದರಾಮ ಆವೊತ್ತಿನ ವಚನಕಾರರಲ್ಲೊಬ್ಬ. **ಅಲ್ಲಮಪ್ರಬು, ದೇವರ ದಾಸಿಮಯ್ಯ, ಚನ್ನ**ಬಸವರಂತೆ ವಚನ ಬರೆಯುತ್ತಿದ್ದ ಸಿದ್ದರಾಮ ಕನ್ನಡದ ಸಾಹಿತ್ಯಕ್ಕೆ 68000 ವಚನಗಳ ಕೊಡುಗೆ ನೀಡಿದ ಕವಿ. ವಚನಗಳಶ್ಟೇ ಅಲ್ಲದೇ ಸಿದ್ದರಾಮ ಮೂರು ಸಾಲಿನ ಬಕ್ತಿಯ ಪದ್ಯಗಳನ್ನು ಬರೆಯುತ್ತಿದ್ದ.

ಬಸವಣ್ಣನವರಂತೆ ಬೇರೆ ಜಾತಿ ಮದುವೆಗಳಿಗೆ ಹುರುಪು ನೀಡಿ, ಸಮಾಜದ ಕುಂದು ಕೊರತೆಗಳನ್ನು ಹೋಗಲಾಡಿಸಲು ಹೋರಾಡಿದ ಶರಣರ ಹೊತ್ತಿನ ಸಂತ ಸಿದ್ದೇಶ್ವರ. ಬಹಳಶ್ಟು ನೀರಾವರಿ ಹಮ್ಮುಗೆಗಳನ್ನು ಕಯ್ಗೆತ್ತಿಕೊಂಡು ಮಂದಿಯ ನೀರಿನ ಬವಣೆ ನೀಗಿಸಿದ ಸಂತ ಸಿದ್ದರಾಮ. ಸಿದ್ದರಾಮೇಶ್ವರ ವೀರಶಯ್ವ / ಲಿಂಗಾಯತ ದರ‍್ಮದ ವಿಚಾರಗಳ ಪರವಾಗಿ ಮಂದಿಯಲ್ಲಿ ಪ್ರಚಾರ ಮಾಡುತ್ತಿದ್ದ. ಹೀಗೆ ಒಮ್ಮೆ ಪ್ರವಚನ ಮಾಡಲು ಹೋಗಿದ್ದಾಗ ಇವನ ಒಳ್ಳೆಯ ವಿಚಾರಗಳಿಗೆ ಮರುಳಾಗಿ ಹುಡುಗಿಯೊಬ್ಬಳು ಮದುವೆಯಾಗ ಬಯಸಿದಳು. ಸಂತನಾದ ಸಿದ್ದರಾಮ ಮದುವೆಗೆ ಒಪ್ಪಲಿಲ್ಲ, ಬಕ್ತೆಯ ಮನಸು ಸಮಾದಾನಗೊಳಿಸಲು ತನ್ನ ಬಳಿಯಿದ್ದ ಯೋಗದಂಡ (ಕೋಲು) ದ ಜೊತೆಗೆ ಮದುವೆಯಾಗಲು ತಿಳಿಸಿದ. ಈ ಮದುವೆಯ ಹಬ್ಬವೇ ವರುಶಕ್ಕೊಮ್ಮೆ ಜಾತ್ರೆಯಂತೆ ಆಚರಣೆಗೊಳ್ಳುತ್ತದೆ.

ನಂದಿಕೋಲುಗಳನ್ನೇ ಮದುಮಗ, ಮದುಮಗಳಂತೆ ಸಿಂಗರಿಸಿ ಊರ ತುಂಬೆಲ್ಲ ದಿಬ್ಬಣದ ಮೆರವಣಿಗೆ ಮಾಡಿ ಮದುವೆಯನ್ನು ಅದ್ದೂರಿಯಾಗಿ ನಡೆಸಲಾಗುತ್ತದೆ. ವಿಜಾಪುರದ ಸುತ್ತಮುತ್ತಲಿನ ಎಲ್ಲ ಜನತೆ ಒಗ್ಗೂಡಿ ಇದರಲ್ಲಿ ಬಾಗಿಯಾಗಿ ಜನವರಿ 14 ರಿಂದ 20 ರವರೆಗೆ ಒಂದು ವಾರದ ಹೊತ್ತು ನಡೆಯುವ ಜಾತ್ರೆಗೆ ಮೆರುಗು ನೀಡುತ್ತಾರೆ.

ಜಾತ್ರೆಯಲ್ಲಿ ವಿವಿದ ಕುಸ್ತಿ, ಕಬಡ್ಡಿಯಂತಹ ಆಟೋಟ, ಪಯ್ಪೋಟಿಗಳನ್ನು ನಡೆಸಲಾಗುತ್ತದೆ. ಎತ್ತು-ದನಗಳ ಜಾತ್ರೆಯೂ ಇವುಗಳಲ್ಲಿ ವಿಶೇಶವಾದದ್ದು. ಬೇರೆ ಬೇರೆ ಊರುಗಳಿಂದ ಬರುವ ರಯ್ತುರು ತಮ್ಮ ದನ ಎತ್ತುಗಳನ್ನು ಇಲ್ಲಿ ತೋರ‍್ಪಡಿಸುತ್ತಾರೆ. ದನ ಎತ್ತುಗಳನ್ನು ಕೊಳ್ಳಲು, ಮಾರಲು ಇದು ತಕ್ಕ ಮಾರುಕಟ್ಟೆ. ಇದನ್ನು ನೋಡಲೆರಡು ಕಣ್ಣು ಸಾಲದು. ಆಟೋಟಗಳಲ್ಲಿ ಗೆಲ್ಲುವರಿಗೆ ಆತಿತ್ಯ ವಹಿಸುವ ಶ್ರೀ ಸಿದ್ದೇಶ್ವರ ಸಂಸ್ತೆಯು ಬಹುಮಾನ ನೀಡಿ ಗವ್ರವಿಸುತ್ತದೆ. ನೋಡಲು ಚೆಂದದ ಹಾಗೂ ಕಸುವಿನ ದನಗಳನ್ನು ಹೊಂದಿರುವ ರಯ್ತುರಿಗೂ ಕೂಡ ಸಂಸ್ತೆ ಪರವಾಗಿ ಬಹುಮಾನವಿರುತ್ತದೆ. ಈ ಮುಂಚೆ ಆಶ್ರಮ ರಸ್ತೆಯ ಬಯಲು ತಾಣದಲ್ಲಿ ನಡೆಯುತ್ತಿದ್ದ ದನಕರು ಜಾತ್ರೆ ಇದೀಗ ವಿಜಾಪುರ ಹೊರಬಾಗದ ತೊರವಿಯಲ್ಲಿ ನಡೆಯುತ್ತದೆ.

ಜಾತ್ರೆಯ ಮುಕ್ಯ ಸೆಳೆತ ಮದ್ದು ಸಿಡಿಸುವ ಕಾರ್‍ಯಕ್ರಮ. ವಿಜಾಪುರ ಜಿಲ್ಲೆಯ ಡಾ.ಬಿ.ಆರ್.ಅಂಬೇಡ್ಕರ್ ಆಟದ ಬಯಲಿನಲ್ಲಿ ಮದ್ದು ಸಿಡಿಸುವ ಕಾರ್‍ಯಕ್ರಮವಿರುತ್ತದೆ. ಆಗಸದಲ್ಲಿ ಬಗೆ ಬಗೆಯ ಚಿತ್ತಾರ ಮೂಡಿಸುವ ಮದ್ದುಗಳ ಬರಾಟೆ ಮಂದಿಯ ಮನವನ್ನು ಮುದಗೊಳಿಸಿ ಹಬ್ಬದ ಸಂತಸ ಇಮ್ಮಡಿಗೊಳಿಸುತ್ತ ಬಂದಿದೆ. ಕನ್ನಡಿಗರಲ್ಲಿದ್ದ ಸಾಮಾಜಿಕ ಪಿಡುಗು ತೊಲಗಿಸಲು ಹೋರಾಡಿದ ಸಿದ್ದರಾಮೇಶ್ವರನ ಗುಣಗಳನ್ನು ನಾವುಗಳು ಅಳವಡಿಸಿಕೊಂಡು ಮುನ್ನುಗ್ಗಬೇಕಿದೆ.

(***ಚಿತ್ರ ಸೆಲೆ:*** thehindu.com)

# ಎಲ್ಲರ ತಾಯಿ ಯಲ್ಲಮ್ಮ

- ಜಯತೀರ್ಥ ನಾಡಗವ್ಡ.





ಎಲ್ಲರ ತಾಯಿ ಎಂದೇ ಕ್ಯಾತಿ ಪಡೆದಿರುವ ತಾಯಿ **ಸವದತ್ತಿ ರೇಣುಕಾ ಯಲ್ಲಮ್ಮ**/ ಎಲ್ಲಮ್ಮನ ಬಗ್ಗೆ ಈ ಬರಹ. ಹೆಸರೇ ಹೇಳುವಂತೆ ಯಲ್ಲಮ್ಮ ತನ್ನ ಎಲ್ಲರ ಕಾಪಾಡುವ ತಾಯಿ. ಬಡಗಣ ಕರ್ನಾಟಕದ ಪ್ರಮುಕ ಪ್ರವಾಸಿ ತಾಣ ಸವದತ್ತಿ ಯಲ್ಲಮ್ಮ. ಬೆಳಗಾವಿ ಜಿಲ್ಲೆಯ ಸವದತ್ತಿಯ ಊರ ಹೊರಗೆ 5 ಕಿ.ಮೀ. ದೂರದ ರಾಮಲಿಂಗ ಬೆಟ್ಟಗುಡ್ಡಗಳ ನಡುವಣ ಯಲ್ಲಮ್ಮನ ನೆಲೆ. ಹಲವಾರು ಕನ್ನಡಿಗರು ರೇಣುಕಾ ಯಲ್ಲಮ್ಮನ ಬಕ್ತರು, ಯಲ್ಲಮ್ಮನೇ ಇವರ ಮನೆದೇವತೆ.



ಗುಡ್ಡದ ತಪ್ಪಲಿನಲ್ಲಿ ಚಂದದ ಯಲ್ಲಮ್ಮನ ದೊಡ್ಡ ದೇಗುಲ, ಇದಕ್ಕೆ **ಪರಶುರಾಮ, ಮಾತಂಗಿ** ಗುಡಿಗಳು ಸುತ್ತುವರಿದಿವೆ. ಯಲ್ಲಮ್ಮನ ಗಂಡ **ಜಮದಗ್ನಿ** ಗುಡಿ ಮಾತ್ರ ಅರ್ಧ ಕಿ.ಮೀ ದೂರದ ಇನ್ನೊಂದು ಗುಡ್ಡದಲ್ಲಿ ನೆಲೆಸಿದೆ. ಇದಕ್ಕೆ ಕಾರಣ ಜಮದಗ್ನಿ ಮುನಿಯ ಸಿಟ್ಟೇ ಇರಬೇಕು ಎಂಬುದು ಹಲವರ ಅನಿಸಿಕೆ. ಹಳದಿ ಬಣ್ಣದ ಅರಿಶಿನ ಬಂಡಾರ ಯಲ್ಲಮ್ಮನಿಗೆ ತುಂಬಾ ಒಲವಿನದು. ಇದೇ ಕಾರಣಕ್ಕೆ ಸವದತ್ತಿ ಯಲ್ಲಮ್ಮನ ಗುಡ್ಡಕ್ಕೆ ಬರುವ ಎಲ್ಲ ಬಕ್ತರು ಬಂಡಾರವನ್ನು ಹಣೆಗೆ ಬಳಿದುಕೊಂಡು ಬರುತ್ತಾರೆ. ಇದು ಪ್ರಸಾದದಂತೆ ಇಲ್ಲಿ ಬರುವ ಎಲ್ಲರಿಗೂ ನೀಡಲಾಗುತ್ತದೆ.

**ಇತಿಹಾಸದ ಹಿನ್ನೆಲೆ**



ರಾಷ್ಟ್ರಕೂಟರ ಆಳ್ವಿಕೆಯಲ್ಲಿ ಸಾಮಂತರಾದ "ರಟ್ಟ"ದೊರೆಗಳು ಆಳುತ್ತಿದ್ದ ನಾಡಿನ ಒಂದು ಬಾಗವಾಗಿತ್ತು ಸವದತ್ತಿ. ಸವದತ್ತಿಯನ್ನು ತಮ್ಮ ನೆಲೆವೀಡಾಗಿ ಮಾಡಿಕೊಂಡು ರಟ್ಟರು ಸವದತ್ತಿಯಲ್ಲಿ ಯಲ್ಲಮ್ಮ ದೇವತೆಯ ಗುಡಿಯನ್ನು ಕಟ್ಟಿ ಬೆಳೆಸಿದರು ಎಂದು ಇತಿಹಾಸ ಹೇಳುತ್ತದೆ. ರಟ್ಟರ ಪ್ರಮುಕ ದೊರೆ **ಬೊಮ್ಮಪ್ಪ ನಾಯಕ 1514**ರಲ್ಲಿ ಯಲ್ಲಮ್ಮನ ದೇವಸ್ತಾನ ಕಟ್ಟಿದವನೆಂದು ತಿಳಿದುಬರುತ್ತದೆ. ಸವದತ್ತಿಯ ಬಳಿಯ ಪಾರಸಗಡ ಕೋಟೆ, ಬೆಳಗಾವಿ ಊರಿನ ಕೋಟೆ ರಟ್ಟರ ಆಳಿಕೆಯ ಮುಕ್ಯವಾದ ಕೊಡುಗೆಗಳು.

ರೇಣುಕಾ ಯಲ್ಲಮ್ಮ ಸಿಟ್ಟಿನ ಮುನಿ ಜಮದಗ್ನಿಯ ಹೆಂಡತಿಯಾಗಿದ್ದಳು. ಒಮ್ಮೆ ಮುನಿಯ ಸಿಟ್ಟಿಗೆ ಗುರಿಯಾಗಿದ್ದ ರೇಣುಕಾಳನ್ನು ಮುಗಿಸಬೇಕೆಂದು ತನ್ನೆಲ್ಲ ಮಕ್ಕಳಿಗೆ ಜಮದಗ್ನಿ ಕೇಳಿಕೊಂಡರು. ಇದಕ್ಕೆ ಯಾರು ಮುಂದೆ ಬರದಿದ್ದಾಗ ಕೊನೆಯ ಮಗ ಪರಶುರಾಮ ತಂದೆಯ ಮಾತನ್ನು ಚಾಚೂ ತಪ್ಪದೇ ಪಾಲಿಸಿ, ಸ್ವಂತ ತಾಯಿ ರೇಣುಕಾಳ ತಲೆಯನ್ನು ತನ್ನ ಕೊಡಲಿಯಿಂದ ಎರಡು ಹೋಳಾಗಿಸಿದ. ತನ್ನ ಮಾತನ್ನು ನಡೆಸಿಕೊಟ್ಟ ಮಗನಿಂದ ಸಂತಸಗೊಂಡ ಜಮದಗ್ನಿ ಮುನಿಗಳು ಮಗನಿಗೆ ಮೂರು ವರ ನೀಡುವುದಾಗಿ ಹೇಳಿದರು. ಇದೇ ಅವಕಾಶವನ್ನು ಬಳಸಿಕೊಂಡ ಪರಶುರಾಮ ತಾಯಿಯನ್ನು ಮರುಹುಟ್ಟಿಸಿಬೇಕು, ಸಿಟ್ಟಿಗೆ ಗುರಿಯಾಗಿ ಸುಟ್ಟು ಬಸ್ಮರಾದ ತನ್ನ ಇತರೆ ತಮ್ಮಂದಿರು ಬೇಕು ಮತ್ತು ಜಮದಗ್ನಿ ಮುನಿಗಳು ತಮ್ಮ ಕೋಪವನ್ನು ಬಿಟ್ಟುಬಿಡಬೇಕೆಂದು ಕೇಳಿಕೊಂಡಿದ್ದನಂತೆ. ಇದು ಪುರಾಣದಿಂದ ತಿಳಿದುಬರುವ ಕತೆ.

ಸವದತ್ತಿಯ ಊರ ಹೊರಗೆ 2-3 ಕಿ.ಮೀ ದೂರದಲ್ಲಿ ನಿಮಗೆ ಜೋಗುಳ ಬಾವಿ ಕಾಣಸಿಗುತ್ತದೆ. ಇಲ್ಲಿಂದಲೇ ನಿಮ್ಮ ಬೆಟ್ಟಿ ಆರಂಬಗೊಳ್ಳುತ್ತದೆ. ಯಲ್ಲಮ್ಮನ ಕಾಣಲು ಹೋಗುವ ಮೊದಲು ಜೋಗುಳ ಬಾವಿಯ ನೀರನ್ನು ತಲೆಯ ಮೇಲೆ ಸಿಂಪಡಿಸಿಕೊಂಡರೆ ಕಾಯಿಲೆ ರುಜಿನಗಳು ಯಾವುದು ಬರುವುದಿಲ್ಲವೆಂದು ಅನೇಕರ ನಂಬಿಕೆ. ಜೋಗುಳ ಬಾವಿ "ರೇಣುಕಾ ಸಾಗರ" ದಿಂದ ಉಂಟಾದ ಹೊಂಡ. ಬಡಗಣ ಕರ್ನಾಟಕದ ಹುಬ್ಬಳ್ಳಿ-ದಾರವಾಡ, ಬೆಳಗಾವಿ, ಗದಗ ಜಿಲ್ಲೆಗಳಿಗೆ ಪ್ರಮುಕ ನೀರಿನ ಸೆಲೆಯಾಗಿರುವ ಮಲಪ್ರಬಾ ಹೊಳೆಯ ಹಿನ್ನೀರು ಸೇರಿಕೊಂಡು "ರೇಣುಕಾ ಸಾಗರ" ಹುಟ್ಟಿಕೊಂಡಿದೆ.



**ಜಾತ್ರೆ**

ಪ್ರತಿ ವರುಶ ಬಾರತ ಹುಣ್ಣಿಮೆಯ ದಿನದಲ್ಲಿ ಹತ್ತಾರು ದಿನಗಳ ಕಾಲ ಅಂದರೆ ಪೆಬ್ರವರಿಯ ಹೊತ್ತಿನಲ್ಲಿ ಯಲ್ಲಮ್ಮನ ಗುಡ್ಡದಲ್ಲಿ ಜಾತ್ರೆ ನಡೆಯುತ್ತದೆ. ಕರ್ನಾಟಕವಲ್ಲದೇ ನೆರೆಯ ಆಂದ್ರ, ಮಹಾರಾಶ್ಟ್ರ, ತಮಿಳ್ನಾಡಿನ ಹಲವಾರು ಮಂದಿ ಇಲ್ಲಿಗೆ ಬಂದು ದೇವಿಯ ದರುಶನ ಪಡೆದು ಹೋಗುತ್ತಾರೆ. ದಿನಾಲೂ ಸಾವಿರಾರು ಬಕ್ತರು ಬೇಟಿ ನೀಡುವ ಈ ತಾಣದಲ್ಲಿ ಜಾತ್ರೆಯ ಹೊತ್ತಿನಲ್ಲಂತೂ ಲಕ್ಶಾಂತರ ಜನಜಂಗುಳಿಯಿಂದ ಗಿಜಿಗಿಟ್ಟಿರುತ್ತದೆ ನೋಡಲೆರಡು ಕಣ್ಣು ಸಾಲದು. ರೇಣುಕಾ ಎಲ್ಲಮ್ಮನ ವಿಶೇಶ ಬಕ್ತರೆಂದು ಹೇಳಲ್ಪಡುವ ಜೋಗತಿಯರು ಈ ಹೊತ್ತಿನಲ್ಲಿ ಕಿಕ್ಕಿರಿದು ಸೇರಿರುತ್ತಾರೆ.

**ಕೆಟ್ಟ ಪದ್ದತಿ**

ದೇವದಾಸಿ ಎಂಬ ಕೆಟ್ಟ ಪದ್ದತಿ ರೇಣುಕಾ ಯಲ್ಲಮ್ಮನ ತಾಣದಲ್ಲಿ ಹಳೆಯ ಕಾಲದಿಂದ ಇತ್ತು. ಹೆಣ್ಣುಮಕ್ಕಳನ್ನು ಶೋಶಿಸಿ ದೇವರ ಹೆಸರಿನಲ್ಲಿ ಕೆಟ್ಟ ಕೆಲಸಕ್ಕೆ ದೂಡಲಾಗುತ್ತಿತ್ತು. ಮಂದಿಯ ಕಲಿಕೆ, ತಿಳುವಳಿಕೆ ಹಾಗೂ ಸರ್ಕಾರದ ಸತತ ಯತ್ನಗಳಿಂದ ಈ ಪದ್ದತಿಗೆ ಸಾಕಶ್ಟು ಕಡಿವಾಣ ಹಾಕಲಾಗಿದೆ. ಇಂತ ಸಾಮಾಜಿಕ ಪಿಡುಗುಗಳನ್ನ ಪೂರ್ತಿಯಾಗಿ ತೊಲಗಿಸುವತ್ತ ಸರ್ಕಾರಗಳು ಇನ್ನಶ್ಟು ಕ್ರಮಗಳನ್ನು ಕಯ್ಗೊಳ್ಳಬೇಕಿದೆ.

**ಸವದತ್ತಿ ಯಲ್ಲಮ್ಮನನ್ನು ತಲುಪುವ ಬಗೆ**

**ರಸ್ತೆ ಸಾರಿಗೆ** - ಬೆಳಗಾವಿ ಜಿಲ್ಲೆಯಲ್ಲಿ ಸವದತ್ತಿ ತಾಲೂಕಾಗಿದ್ದು, ಕರುನಾಡಿನ ಪ್ರಮುಕ ಊರುಗಳಿಂದ ಇಲ್ಲಿಗೆ ಕರ್ನಾಟಕ ಸಾರಿಗೆಯ ಬಸ್ಸಿನ ಏರ್ಪಾಟು ಇರುತ್ತದೆ. ಸವದತ್ತಿ ಊರಿನ ಬಸ್ ನಿಲ್ದಾಣದಿಂದ ಗಂಟೆಗೊಂದರಂತೆ ಬಸ್ಸುಗಳು ಯಲ್ಲಮ್ಮ ಗುಡ್ಡದತ್ತ ಬರುತ್ತವೆ. ಸವದತ್ತಿಯಿಂದ ರಾಮದುರ್ಗದ ಕಡೆಗೆ ತೆರಳುವ ಯಾವುದೇ ಸಾರಿಗೆ ಬಸ್ ನಲ್ಲಿ ಜೋಗುಳ ಬಾವಿಯಲ್ಲಿ ಇಳಿದರೆ, ಮುಂದೆ ಗುಡ್ಡಕ್ಕೆ ಸಾಗಲು ಸೀಟೊಂದಕ್ಕೆ 20 ರೂಪಾಯಿಯಂತೆ ಆಟೋಗಳು ದೊರಕುತ್ತವೆ.
**ರಯ್ಲು ಸಾರಿಗೆ** - ಹತ್ತಿರದ ರಯ್ಲು ನಿಲ್ದಾಣ ದಾರವಾಡದಲ್ಲಿದ್ದು ಇದು ಕೇವಲ 38 ಕಿ.ಮೀ. ದೂರ.
**ಬಾನೋಡ** - ಹತ್ತಿರದ ಬಾನೋಡ ತಾಣ ಹುಬ್ಬಳ್ಳಿ 58 ಕಿ.ಮೀ ದೂರದಲ್ಲಿದೆ. ಬೆಳಗಾವಿ ಬಾನೋಡ ತಾಣ 85 ಕಿ.ಮೀ.

ಕರ್ನಾಟಕ ಮುಜರಾಯಿ ಇಲಾಕೆಯು ಕೋಣೆಗಳನ್ನು ಕಟ್ಟಿಸಿ ಯಲ್ಲಮ್ಮನ ಗುಡ್ಡದಲ್ಲಿ ಉಳಿದುಕೊಳ್ಳುವರಿಗೆ ಒಳ್ಳೆಯ ಏರ್ಪಾಟುಗಳನ್ನು ಒದಗಿಸಿದೆ. ಸವದತ್ತಿ ಊರಿನಲ್ಲೂ ಉಳಿದುಕೊಳ್ಳಲು ಬಾಡಿಗೆ ಕೋಣೆಗಳು ಸಿಗುತ್ತವೆ.

**ಸುತ್ತಲಿನ ನೋಡತಕ್ಕ ಊರುಗಳು**

*ಸವದತ್ತಿಯ ಕೋಟೆ*
ನವಲಗುಂದದ ಶಿರಸಂಗಿ ಸಂಸ್ತಾನದ **ಜಯಪ್ಪ ದೇಸಾಯಿ**ಗಳು ಕಟ್ಟಿದ ಕಲ್ಲಿನ ಸವದತ್ತಿ ಕೋಟೆ ನೋಡಲು ಬಲು ಅಂದವಾಗಿದೆ. ಒಳಗಡೆ ಸವದತ್ತಿ ಪುರಸಬೆ ತೋಟವೊಂದನ್ನು ಬೆಳೆಸಿ ಇದರ ಅಂದ ಇಮ್ಮಡಿಗೊಳಿಸಿದೆ. ಕೋಟೆಯ ಒಳಗೆ ಹಲವು ಮೆಟ್ಟಿಲುಗಳ ಮೇಲಿರುವ ಆವೊತ್ತಿನ ಕಾಡು ಸಿದ್ದೇಶ್ವರ ಗುಡಿಯು ಕಣ್ಸೆಳೆಯುವ ಚಿತ್ತಾರಗಳಿಂದ ಕೂಡಿದೆ.

*ನವಿಲುತೀರ್ತ*
ಸವದತ್ತಿ ಯಲ್ಲಮ್ಮನ ತಾಣದಿಂದ 15 ಕಿ.ಮೀ ದೂರದಲ್ಲಿ ಮಲಪ್ರಬಾ ಹೊಳೆಗೆ ಅಡ್ಡಲಾಗಿ ಆಣೆಕಟ್ಟು ಕಟ್ಟಲಾಗಿದೆ. ಇದೇ ನವಿಲುತೀರ್ತ. ಸವದತ್ತಿಯಿಂದ ಮುನವಳ್ಳಿಗೆ ತೆರಳುವ ದಾರಿಯಲ್ಲಿ ಸಿಕ್ಕುತ್ತದೆ. ನವಿಲುಗಳ ಪಕ್ಕಿದಾಮ ಹೊಂದಿರುವ ನವಿಲುತೀರ್ತ ನೋಡುಗರ ಕಣ್ಣಿಗೆ ಹಬ್ಬವುಂಟುಮಾಡುವ ತಾಣ. ತರಹ ತರಹದ ಸುಂದರ ನವಿಲುಗಳು ಇಲ್ಲಿ ತಮ್ಮ ಗರಿಬಿಚ್ಚಿ ಕುಣಿಯುವುದನ್ನು ಕಂಡರೆ ಮಕ್ಕಳಶ್ಟೇ ಅಲ್ಲ ದೊಡ್ಡವರು ನಲಿಯುತ್ತಾರೆ. ಆಣೆಕಟ್ಟಿನ ಅಕ್ಕಪಕ್ಕದಲ್ಲಿ ಚಂದವಾಗಿ ಹೂತೋಟ ಮಾಡಿದ್ದು ಇಲ್ಲಿಗೆ ಹೆಚ್ಚುಜನರನ್ನು ಸೆಳೆಯಲು ಕಾರಣವಾಗಿದೆ. ತೋಟಗಾರಿಕೆ ಇಲಾಕೆಯವರು ಈ ಹೂತೋಟವನ್ನು ಅಂದವಾಗಿರಿಸಿದ್ದು ಮೆಚ್ಚುಗೆಯ ಕೆಲಸ.

*ಸೊಗಲ್ ಜಲಪಾತ /ಪಾಲ್ಸ್*
ಸೊಗಲ್ ಜಲಪಾತ ಕೂಡ ಮಲಪ್ರಬಾ ಹೊಳೆಯಿಂದಲೇ ಉಂಟಾದದ್ದು, ಇದು ಕೂಡ ಗುಡ್ಡ-ಬೆಟ್ಟಗಳಿಂದ ಸುತ್ತುವರೆದಿದೆ. ಮುನವಳ್ಳಿಯಿಂದ ಮುಂದಕ್ಕೆ ಬಯ್ಲುಹೊಂಗಲ ದಾರಿಯಲ್ಲಿ ಸಾಗಿದರೆ 20 ಕಿ.ಮೀ ದೂರದಲ್ಲಿ ಸೊಗಲ್ ಕಾಣಸಿಗುತ್ತದೆ. ಸೊಗಲಿನಲ್ಲಿ ಹೆಸರುವಾಸಿ ಸೊಮೇಶ್ವರನ ಗುಡಿಯಿದೆ. ಇದು ರಾಶ್ಟ್ರಕೂಟರ ಕಾಲದಲ್ಲಿ ಕಟ್ಟಲ್ಪಟ್ಟಿದೆ. ಸೊಗಲಿನಲ್ಲಿ ಇನ್ನೊಂದೆಡೆ ಹಳೆಯಕಾಲದ ಶಿವ-ಪಾರ್ವತಿ ದೇವಾಲಯವೊಂದಿದೆ, ಹಿಂದೆ ಇದು ಮದುವೆ ಮಂಟಪವಾಗಿದ್ದು ಇಲ್ಲಿಯೇ ಶಿವ -ಪಾರ್ವತಿ ಮದುವೆ ನಡೆದಿತ್ತೆಂದು ಹೇಳಲಾಗುತ್ತದೆ. ಇದಕ್ಕೆ ಬಲನೀಡುವಂತೆ ಶಿವನ ಬಾಸಿಂಗ ತೊಟ್ಟ ಮೂರ್ತಿಯೊಂದು ಇಲ್ಲಿದೆ. ಇದಲ್ಲದೇ ಇಲ್ಲಿ ಗಿರಿಜೆ, ಅಜ್ಜಪ್ಪನ ಹಲವು ಚಿಕ್ಕ ಪುಟ್ಟ ಗುಡಿಗಳು ಸಿಗುತ್ತವೆ.

ಹಿಂದಿನ ಕಾಲದಲ್ಲಿ ಮುನಿಗಳೊಬ್ಬರು ಇಲ್ಲಿ ತಪಸ್ಸನ್ನು ಮಾಡಿ ಸಿದ್ಧಿ ಪಡೆದಿದ್ದು ವಿಶೇಶವಾದರೆ, ಕಾಡಿನ ಹುಲಿಗಳು ಕೂಡ ಆ ಕಾಲದಲ್ಲಿ ಪ್ರವಚನ ಕೇಳಲು ಇಲ್ಲಿಗೆ ಬರುತ್ತಿದ್ದವು ಎಂಬುದು ಅಚ್ಚರಿ ಮೂಡಿಸುತ್ತದೆ. ಸೊಗಲ್ ನ ಜಲಪಾತದಲ್ಲಿ ನೀರು ಹಾಲಿನ ನೊರೆಯಂತೆ ದುಮುಕ್ಕಿ ಬಂದು 30 ಅಡಿ ಕೆಳಗೆ ಜಿಗಿದು ನೋಡುಗರಿಗೆ ಮುದನೀಡುತ್ತದೆ.

ನವಿಲುತೀರ್ತ, ಸೊಗಲ್ ಅಲ್ಲದೇ ಗೊಡಚಿ ವೀರಬದ್ರೇಶ್ವರ, ಗೋಕಾಕ್ ಜಲಪಾತಗಳು 60-80 ಕಿ.ಮೀ ದೂರದಲ್ಲಿದ್ದು ಆಸಕ್ತಿ ಇದ್ದವರು ಹೋಗಿ ವೀರಬದ್ರನ ದರ್ಶನ ಪಡೆದು ಗೋಕಾಕದ ಕರದಂಟಿನ ರುಚಿ ಸವಿಯಬಹುದು.

ಕನ್ನಡದ ಹಲವಾರು ಓಡುತಿಟ್ಟಗಳು ಸವದತ್ತಿ ಯಲ್ಲಮ್ಮನ ತಾಣದಲ್ಲಿ ಚಿತ್ರೀಕರಣಗೊಂಡಿವೆ. ಅದರಂತೆ ರೇಣುಕಾ ಯಲ್ಲಮ್ಮನ ಕತೆಯ ಹಲವು ಓಡುತಿಟ್ಟಗಳು ಕನ್ನಡದಲ್ಲಿ ಮೂಡಿಬಂದಿವೆ. ಕನ್ನಡ-ಕನ್ನಡಿಗರ ಸಂಸ್ಕ್ರುತಿಯ ಗುರುತಾಗಿರುವ ಯಲ್ಲಮ್ಮನಿಗೆ ಉಗೇ ಉಗೇ!

# ಸುಗ್ಗಿಯ ಹಿಗ್ಗಿನ ಸಂಕ್ರಾಂತಿ

- ಕಿರಣ್ ಮಲೆನಾಡು.



ಇಂದು ನಮ್ಮ ನಾಡಿನ ಸುಗ್ಗಿ, ಮಕರ ಸಂಕ್ರಾಂತಿ ಎಂಬ ಸುಗ್ಗಿಯ ಹಿಗ್ಗಿನ ಹಬ್ಬ. ಹೆಂಗೆಳೆಯರು ಮೊಗ್ಗಿನ ಜಡೆ ಹಾಕಿಕೊಂಡು, ಹಿರಿ ಹಿಗ್ಗಿದ ಹಿರಿಯರು, ಹೈದರುಗಳೆಲ್ಲ ಹೊಸಬಟ್ಟೆಯುಟ್ಟು, ನೆಂಟರು ಮತ್ತು ಗೆಳಯರ ಮನೆಮನೆಗೆ ತೆರಳಿ ಕಬ್ಬಿನ ತುಂಡಿನ ಜೊತೆ ಎಳ್ಳು ಬೀರುವುದು ಹೆಚ್ಚಿನ ವಾಡಿಕೆ. ಗದ್ದೆಯ ಪೈರಿನ ಕದಿರನ್ನು ಮನೆ ಬಾಗಿಲಿಗೆ ಕಟ್ಟುವುದು, ಹೊಸ ಅಕ್ಕಿಯಲ್ಲಿ ತಿಂಡಿ ತಿನಿಸುಗಳನ್ನು ಮಾಡುವುದು, ಆರಂಬಕ್ಕೆ ನೆರವಾದ ದನಕರುಗಳನ್ನು ಮತ್ತು ನಗ, ನೇಗಿಲುಗಳನ್ನು ಪೂಜೆ ಮಾಡಿ ಕಿಚ್ಚು ಹಾಯಿಸುವುದು, ಇವು ಹಬ್ಬವನ್ನು ಕೊಂಡಾಡುವ ಕೆಲಬಗೆಗಳು.

ಮಾಗಿಯ ಚಳಿಗೆ ಮುದುಡಿದ ಮನಕ್ಕೆ ಮುದ, ಸಂತಸ ನೀಡುವ ಈ ಹಬ್ಬ ಮಕರ ಸಂಕ್ರಾಂತಿ. ಜನವರಿ ತಿಂಗಳ ಕೊರೆಯುವ ಚಳಿಯಲ್ಲಿ ಆಚರಿಸಲ್ಪಡುವ ಸಂಕ್ರಾಂತಿ ಎಂದರೆ ಎಲ್ಲೆಡೆ ಬಳಕೆಯಲ್ಲಿರುವ ಸುಗ್ಗಿ ಹಬ್ಬ.ಸಂಕ್ರಾಂತಿ ಬರುವ ಹೊತ್ತಾದರೂ ಎಂತಹುದು? ಹಲವೆಂಟು ಪೈರಿನ ಪಸಲುಗಳು, ಬೆಳೆದ ಬೇಳೆ ಕಾಳುಗಳು, ಮನೆಯ ಮೂಲೆ-ಮೂಲೆಯಲಿರುವ ಚೀಲ, ಗುಡಾಣ, ಹರಿವಿ, ಮಡಕೆ ಸಾಲುಗಳು, ಕಣಜವೇ ಮುಂತಾದವುಗಳಲ್ಲಿ ತುಂಬಿ ಇಟ್ಟಾಡುವ ಕಾಲ. ಎಂತಹ ಬಡವರ ಮನೆಯಲ್ಲೂ ಕಾಳು-ಕಡಿಗಳು ತುಂಬಿ-ತುಳುಕುವ ಈ ಸಮಯದಲ್ಲಿ ಆ ಸಂತಸಕ್ಕೆ ಮತ್ತು ಏಳಿಗೆಗೆ ಕಾರಣವಾದ ದನ-ಕರುಗಳನ್ನು ನಲ್ಮೆಯಿಂದ ಕಾಣುವ ಸಲುವಾಗಿಯೇ ಕೊಂಡಾಡುವುದು ಸಂಕ್ರಾಂತಿ.

ಕರ್ನಾಟಕ, ತಮಿಳುನಾಡು, ಆಂದ್ರ, ತೆಲಂಗಾಣಗಳಲ್ಲಿ ಸರಿಸುಮಾರು ಒಂದೇ ಸಮಯಕ್ಕೆ ಆಚರಿಸಲ್ಪಡುವ ಸಂಕ್ರಾಂತಿ ಹಬ್ಬದ ಮೂಲ ಹಿನ್ನೆಲೆ ಒಂದೇ ಆದರೂ ಮಾಡುವ ನಡೆ ನುಡಿಯಲ್ಲಿ ತುಸು ಬಿನ್ನಾಣಗಳಿವೆ. ಈ ಹಬ್ಬಕ್ಕೆ ಹಲವಾರು ಹೆಸರುಗಳಿವೆ. ಕೆಲವರು ಹಿಗ್ಗಿನಿಂದ ಸುಗ್ಗಿ ಎಂದರೆ, ಮತ್ತೆ ಕೆಲವರು ಪೊಂಗಲ್ ಎನ್ನುತ್ತಾರೆ. ಸಾಮಾನ್ಯವಾಗಿ ಜನವರಿ 14ರಂದೇ ಬರುವ ಈ ಹಬ್ಬ ಕೆಲವೊಮ್ಮೆ ಜ.15ರಂದು ಬರುವುದೂ ಉಂಟು.

ಜನವರಿ ತಿಂಗಳ ನಡುಬಾಗ ಸುಗ್ಗಿಯ ಕಾಲ.ಹಿಂಗಾರು ಬೆಳೆ ಬರುವ ಕಾಲ. ಹೊಸ ಬತ್ತದ ಪಸಲು ಬರುವ ಕಾಲ. ಹೀಗಾಗಿ ಸೊಂಪಾಗಿ ಬೆಳೆದ ಬತ್ತವನ್ನು ಕುಟ್ಟಿ ಇಲ್ಲವೇ  ಗಿರಣಿಯಿಂದ ಅಕ್ಕಿ ಹಿಟ್ಟು ಮತ್ತು ರವೆ ಮಾಡುತ್ತಾರೆ. ಹಿಟ್ಟಿನಲ್ಲಿ ಹಲವು ತಿನಿಸುಗಳನ್ನು ಮಾಡಿ, ಹೊಸ ಅಕ್ಕಿಯಲ್ಲಿ ಸಿಹಿ ಪಾಯಸ ಮಾಡಿ ಅನ್ನ ನೀಡಿದ ದೇವರಿಗೆ ನನ್ನಿ ಸಲ್ಲಿಸಿ ಅದರಲ್ಲಿ ಸ್ವಲ್ಪ ಬಾಗವನ್ನು ದೇವರಿಗೆ ಪ್ರಸಾದವಾಗಿ ಅರ್ಪಿಸುವುದು ಹಬ್ಬದ ಹಿರಿಮೆಗಳಲ್ಲೊಂದು.

ವರುಶಪೂರ್ತಿ ಮೈಮುರಿದು ದುಡಿದ ರೈತನ ಮೊಗದಲ್ಲಿ ಮಂದಹಾಸ ಮೂಡುವ ಈ ಸಡಗರವೇ ಈ ಸುಗ್ಗಿ. ಹಳೆ ಮೈಸೂರು ಸೀಮೆಯಲ್ಲಿ ಹೊಸ ಮಡಕೆಯಲ್ಲಿ, ಹೊಸ ಅಕ್ಕಿಯಲ್ಲಿ ಮಾಡುವ ಸಿಹಿ ಹುಗ್ಗಿ ಬಲು ರುಚಿ. ಅದಕ್ಕಾಗಿಯೇ ಹೆಚ್ಚಾಗಿ ಎಲ್ಲರ ಮನೆಯಲ್ಲೂ ಅಂದು ಸಿಹಿ ಹುಗ್ಗಿ ಮಾಡುತ್ತಾರೆ, ಹೀಗಾಗಿ ಇದನ್ನು ಹುಗ್ಗಿ ಹಬ್ಬ ಎಂದೂ ಕರೆಯುತ್ತಾರೆ. ಅದೇ ರೀತಿಯಲ್ಲಿ ಸಂಕ್ರಾಂತಿ ಸುಗ್ಗಿಯ ಕಾಲವಾದ್ದರಿಂದ ಈ ಹಬ್ಬಕ್ಕೆ ಸುಗ್ಗಿ ಎಂಬ ಹೆಸರೂ ಬಂದಿದೆ. ಈ ದಿನದ ಮತ್ತೊಂದು ಹಿರಿಮೆ ಏನೆಂದರೆ ಬಿಳಿ ಎಳ್ಳು, ಕೊಬ್ಬರಿ, ಹುರಿಗಡಲೆ ಹಾಗೂ ಬೆಲ್ಲ ಹಾಕಿ ತಿನಿಸುಗಳನ್ನು ಮಾಡುವರು. ಹಲವು ಬಾಗದಲ್ಲಿ ಇದಕ್ಕೆ "ಎಳ್ಳು" ಎಂದು ಕರೆಯುವವರು.

ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಮಕ್ಕಳಿಗೆ, ಹೊಸದಾಗಿ ಮದುವೆಯಾದವರಿಗೆ ಕುಸುರೆಳ್ಳಿನಿಂದ ಮಾಡಿದ ಒಡವೆಗಳನ್ನು ತೊಡಿಸಿ ಸಂತಸಪಡುತ್ತಾರೆ. ಅಂದು ಬೆಳಗ್ಗೆ ಬೇಗನೆ ಎದ್ದು, ಎಣ್ಣೆ ಸ್ನಾನ ಮಾಡಿ, ಕುಲದೇವರ ಮುಂದೆ ಮಾಡಿದ ಎಳ್ಳು-ಬೆಲ್ಲ, ಸಕ್ಕರೆ ಅಚ್ಚನ್ನಿಟ್ಟು ನೈವೇದ್ಯ ಮಾಡಿ, ಮನೆಗೆ ಬಂದವರಿಗೆಲ್ಲಾ ಎಳ್ಳು ನೀಡಿ, ಒಳ್ಳೆಯ ಮಾತನಾಡಿ ಎನ್ನುವುದು ವಾಡಿಕೆ. ಸಂಜೆ 5 ವರುಶದೊಳಗಿನ ಮಕ್ಕಳಿಗೆ ಮಣಿ ಸರ ಹಾಕಿ ಎಲಚಿ ಹಣ್ಣು ಹಾಗೂ ಹಣವನ್ನು ಮೇಲಕ್ಕೆ ಎಸೆದು ಒಳ್ಳೆಯದಾಗಲಿ ಎಂದು ಹಾರೈಸುತ್ತ ಆರತಿ ಮಾಡುತ್ತಾರೆ. ಹೆಣ್ಣು ಮಕ್ಕಳು ಹೊಸ ಬಟ್ಟೆ ತೊಟ್ಟು, ಸಿಂಗರಿಸಿಕೊಂಡು ಮನೆ ಮನೆಗೆ ಹೋಗಿ ಎಳ್ಳು ಬೀರುತ್ತಾರೆ.

ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳಿಗೆ ಸಂಕ್ರಾಂತಿ ಬಲು ಸಡಗರದ ಹಬ್ಬ. ತೆಂಕಣ ಕರುನಾಡಿನ ಹಳ್ಳಿಗಳಲ್ಲಿ ಕಣಜದ ಪೂಜೆ, ನೆಲದ ಪೂಜೆ, ಕುಣಿತಗಳು ಹೆಚ್ಚಾಗಿ ಕಂಡು ಬರುತ್ತವೆ. ಕೊಡಗಿನವರು ಸಂಕ್ರಾಂತಿ ಹಿಂದೆ-ಮುಂದೆ 'ಹುತ್ತರಿ ಹಬ್ಬ' ಆಚರಿಸಿ ತಮ್ಮನ್ನು ಕಾಪಾಡುವ `ಇಗ್ಗುತಪ್ಪ'ನಿಗೆ ಬಕುತಿಯಿಂದ ನನ್ನಿ ಸಲ್ಲಿಸುವರು.

ತಮಿಳುನಾಡಿನಲ್ಲಿ ಪೊಂಗಲ್ ನಾಡಹಬ್ಬವಾಗಿ ಆಚರಿಸಲ್ಪಡುತ್ತದೆ. ಹಳೆ ಮೈಸೂರು ಬಾಗದಲ್ಲಿ ರಾಗಿಕಣದಲ್ಲಿ ನಡೆಯುವ ಸುಗ್ಗಿಯ ಕದಿರು ಕಟ್ಟುವುದು ಒಂದು ತೆರನಾದರೆ, ಉತ್ತರ ಕರ್ನಾಟಕದ ಜೋಳದ ಹೊಲದಲ್ಲಿ ನಡೆಯುವ ಸುಗ್ಗಿಯ ಸಿರಿ ಮತ್ತೊಂದು ತೆರನಾದದ್ದು. ಮಲೆನಾಡಿನ  ಬತ್ತ, ಅಡಿಕೆಯ ಸುಗ್ಗಿಯ ಸೊಗಸೇ ಬೇರೆ. ಉತ್ತರ ಕರ್ನಾಟಕದ ಕಡೆ ಇಂದು ಹೊಸ ಅಕ್ಕಿ, ಹೆಸರು ಬೇಳೆಯಿಂದ ಮಾಡುವ ಹುಗ್ಗಿ, ಹೊಸ ಹುಣಸೆ ಹಣ್ಣಿನಿಂದ ತಯಾರಿಸುವ ಹಸಿಹುಳಿ, ಸಿಹಿ ಹುಗ್ಗಿ, ಹೊಸ ಹುಣಸೆಕಾಯಿ ತೊಕ್ಕು ಮಾಡಿ ಮನೆ ಮಂದಿಯೆಲ್ಲ ಸಂತಸದಿಂದ ಊಟ ಮಾಡುವರು.

ಮೈಸೂರು ಬಾಗದಲ್ಲಿ ಸಂಕ್ರಾಂತಿಯ ಎಳ್ಳು ಬೀರುವ ಸೊಬಗು, ಸೊಗಸು ಬಲುಚಂದ. ಆ ದಿನ ಹೊಸದಾಗಿ ಮದುವೆಯಾದ ಹೆಣ್ಣು ಮಕ್ಕಳು ಮಗ್ಗಿನ ಜಡೆ ಹಾಕಿಕೊಂಡು, ಹೊಸ ಸೀರೆಯುಟ್ಟು ನೆಂಟರು ಮತ್ತು ಗೆಳೆಯರ ಮನೆಗೆ ತೆರಳಿ ಕಬ್ಬಿನ ತುಂಡಿನ ಜೊತೆ ಎಳ್ಳು-ಬೆಲ್ಲ ಬೀರುವ ವಾಡಿಕೆ ಇದೆ. ಜೊತೆಗೆ ದೇವರ ಚಿಕ್ಕ ಚಿಕ್ಕ ಮೂರುತಿಗಳನ್ನ ಕೊಡುವುದು ಸಹ ವಾಡಿಕೆಯಲ್ಲಿದೆ .ಇನ್ನು ಚಿಕ್ಕ ವಯಸ್ಸಿನ ಹೆಣ್ಣುಮಕ್ಕಳು ಉದ್ದನೆಯ ರೇಶ್ಮೆಲಂಗ- ದಾವಣಿ ಹಾಕಿಕೊಂಡು ಎಳ್ಳು ಬೀರಿ ಸಂತಸಪಡುತ್ತಾರೆ. ಸಂಕ್ರಾಂತಿಯ ಮುನ್ನಾ ದಿನವನ್ನು ಬೋಗಿಹಬ್ಬ ಎಂದೂ, ಮಾರನೆಯ ದಿನ ಕನೂ ಹಬ್ಬ ಎಂದೂ ಹಲವೆಡೆ ಆಚರಿಸಲಾಗುತ್ತದೆ. ಕರುನಾಡಿನಲ್ಲಿ ಈ ಹಬ್ಬವನ್ನು ಉಪಕಾರದ

ಸಂಕೇತವಾಗಿ ಆಚರಿಸಲಾಗುತ್ತದೆ. ಪೈರಿನ ಪಸಲನ್ನು ನೀಡುವ ನೆಲತಾಯಿಗೆ, ಪೈರಿನ ರಾಶಿಗೆ, ಕ್ರುಶಿ ಕೆಲಸಕ್ಕೆ ಸಹಾಯ ಮಾಡಿದ ಎತ್ತಿನ ಬಂಡಿಗೆ, ದನಗಳಿಗೆ ಸಿಂಗಾರ ಮಾಡಿ ಪೂಜಿಸುತ್ತಾರೆ. ದನಕರುಗಳು ಬೆಚ್ಚದಿರಲಿ, ಬೆದರದಿರಲೆಂದು ಹಾಗು ಅವುಗಳಿಗೆ ದ್ರುಶ್ಟಿ ತಾಗದಿರಲೆಂದು ಬೆಂಕಿಯ ಮೇಲೆ ಹಾರಿಸುತ್ತಾರೆ. ಇದನ್ನು 'ಕಿಚ್ ಹಾಯ್ಸೋದು' ಎಂದು ಕರೆಯುತ್ತಾರೆ. ಸುಗ್ಗಿ ಒಳ್ಳೆತನದ ಹಿರಿಮೆಯಲ್ಲಿ ಆಚರಿಸುವ ಹಿಗ್ಗಿನ ಹಬ್ಬ.

**ಸಂಕ್ರಾಂತಿಯ ಹಿನ್ನೆಲೆಯೇನು?**

ನೇಸರನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ದಾಟುವ ಹೊತ್ತು ಹಾಗು ನೇಸರನು ಮಕರರಾಶಿಯನ್ನು ಸೇರುವ ದಿನ ಮತ್ತು ಅಂದು ನಡೆಸುವ ಹಬ್ಬಕ್ಕೆ ಸಂಕ್ರಾಂತಿ ಎಂದು ಹೆಸರು. ನೆಲದರಿಮೆಯಂತೆ(Geography) ಯಾವುದೇ ನೆಲದಲ್ಲಿ ಸರಿಸಮವಾಗಿ ಹೊತ್ತುಮೂಡುವುದು ಮತ್ತು ಹೊತ್ತುಕಂತುವುದು ವರಶದ ಏರೆಡೇ ದಿನಗಳು, ಆ ದಿನಗಳನ್ನು ಸರಿಯಿರುಳು (equinox) ಎಂದು ಕರೆಯುತ್ತಾರೆ.

ಅಂದು ಹಗಲಿರುಳುಗಳು ದಿನವನ್ನು ಸರಿಪಾಲಾಗಿ,ಅಂದರೆ ತಲಾ 12 ಗಂಟೆಗಳಾಗಿ ಹಂಚಿಕೊಳ್ಳುತ್ತವೆ. ವರುಶದ ಉಳಿದ ದಿನಗಳಲ್ಲಿ ಹಗಲಿರುಳುಗಳು ಸರಿಸಮನಾಗಿರದೆ ಬೇಸಗೆಯಲ್ಲಿ ಹಗಲು ಹೆಚ್ಚು, ಇರುಳು ಕಮ್ಮಿ ಮತ್ತು ಚಳಿಗಾಲದಲ್ಲಿ ಹಗಲು ಕಮ್ಮಿ, ಇರುಳು ಹೆಚ್ಚು ಇರುತ್ತದೆ. ಸರಿಯಿರುಳಿನ ದಿನಗಳ ಹೊರತಾಗಿ ಹೊತ್ತುಮೂಡುಗೆ(Sunrise) ಮೂಡಣದ ಬಲಕ್ಕೆ ಅಂದರೆ ಬಡಗಣಕ್ಕೆ ಇಲ್ಲವೇ ಎಡಕ್ಕೆ ಅಂದರೆ ತೆಂಕಣಕ್ಕೆ ಆಗುತ್ತದೆ. ಚಳಿಗಾಲ ಹೆಚ್ಚಾದಂತೆ ಹೊತ್ತುಮೂಡುಗೆಯು ಹೆಚ್ಚು ತೆಂಕಣ ದಿಕ್ಕಿಗೆ ವಾಲುವುದು ಕಾಣುತ್ತದೆ. ಕೊನೆಗೆ ಒಂದು ದಿನ ತೆಂಕಣ ತುತ್ತ ತುದಿಯ ಹಂತವನ್ನು ತಲುಪಿ ನಿಲುಗಡೆಗೊಂಡು, ಮರುದಿನದಿಂದ ಹೊತ್ತುಮೂಡುಗೆಯು ಮರಳಿ ಎದುರು ದಿಕ್ಕಿನಲ್ಲಿ ಆಗುತ್ತಾ ಹೋಗುತ್ತದೆ.

ಅಂದರೆ ನೇಸರ ಇನ್ನು ತೆಂಕಣ ದಿಕ್ಕಿನತ್ತದ ತನ್ನ ಓಟವನ್ನು ನಿಲ್ಲಿಸಿ ಬಡಗಣ ದಿಕ್ಕಿನತ್ತ ಸಾಗುತ್ತಾನೆ. ಇದು ಚಳಿಗಾಲ ಮುಗಿದು ಮುಂಬರುವ ಬೇಸಗೆಯ ಮುನ್ನರಿವು ಹಾಗು ಇದನ್ನು ಚಳಿಗಾಲದ ನೇಸರ ತಿರುವು' (Winter Solstice with Tropical of Capricorn) ಎಂದೂ ಕರೆಯುವರು, ಗ್ರೆಗೋರಿಯನ್ ನಾಳುತೋರ್ಪುಕದಲ್ಲಿ ಡಿಸೆಂಬರ್ 22ರಂದು ಸಂಕ್ರಮಣವಾದರೆ (Winter Solstice) ನಮ್ಮ ಸಾಂಪ್ರದಾಯಿಕ ನಾಳುತೋರ್ಪುವಿನಂತೆ ಜನವರಿ 14 ಮಕರ ಸಂಕ್ರಮಣ ಆಗುತ್ತದೆ (Sun moves into the Capricorn zodiac known as Makara Sankanti).

ಈ ಹಬ್ಬವನ್ನು ಹಲವು ನಾಡುಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಕರೆಯಲಾಗುತ್ತದೆ. ಈ ಬಗೆ ಬಗೆಯ ಹೆಸರುಗಳ ಪಟ್ಟಿ ಇಂತಿದೆ

| ನಾಡು | ಸುಗ್ಗಿ ಹಬ್ಬದ ಹೆಸರು |
|---|---|
| ಕರ್ನಾಟಕ | ಸುಗ್ಗಿ, ಮಕರ ಸಂಕ್ರಮಣ, ಸಂಕ್ರಾಂತಿ |
| ಕೇರಳ | ಮಕರವಿಳಕ್ಕು, ಪೊಂಗಲ್, ಸಂಕ್ರಾಂತಿ |
| ತಮಿಳುನಾಡು | ಪೊಂಗಲ್, ಸಂಕ್ರಾಂತಿ |

| | |
|---|---|
| ಆಂದ್ರ ಮತ್ತು ತೆಲಂಗಾಣ | ಬೋಗಿ, ಸಂಕ್ರಾಂತಿ |
| ಬಡಗಣ ಬಾರತದ ಬಾಗಗಳು | ಸಂಕ್ರಾಂತಿ, ಮಕರ ಸಂಕ್ರಮಣ, ಉತ್ತರಾಯಣ್, ಕಿಚ್ಡಿ(ಪಡುವಣ ಬಿಹಾರ), ಕುಮಾಂವ್ (ಉತ್ತರಾಕಂಡ್) |
| ಹರ್ಯಾಣ, ಹಿಮಾಚಲ ಪ್ರದೇಶ, ಪಂಜಾಬ್ (ಪಂಜಾಬದಲ್ಲಿ ಸಂಕ್ರಾಂತಿಯ ಹಿಂದಿನ ದಿನವನ್ನು ಲೋಹರಿ ಎಂದು ಕರೆಯುವರು) | ಮಾಗಿ. |
| ಅಸ್ಸಾಂ | ಬೋಗಲಿ ಬಿಹು |
| ಕಾಶ್ಮೀರ | ಶಿಶುರ್ ಸೆಂಕ್ರಾತ್ |
| ನೇಪಾಳ | ಮಗೆ ಸಂಕ್ರಾಂತಿ |
| ತೈಲ್ಯಾಂಡ್ | ಸೊಂಗ್ಕ್ರಾನ್ |
| ಲಾವೋಸ್ | ಪಿಮಾಲೋ |
| ಮಯನ್ಮಾರ್ | ತಿಂಗ್ಯಾನ್ |
| ಕಾಂಬೋಡಿಯ | ಮೋಹ ಸಾಂಗ್ಕ್ರಾನ್ |
| ಬಡಗಣ ಶ್ರೀಲಂಕ | ಪೊಂಗಲ್ |
| ಚೀನಾ | ದೊಂಗ್ಜಿ (Part of Winter solstice) |

(ಮಾಹಿತಿ ಸೆಲೆಗಳು: ***prajavani.net***, ***kannadaratna.com***, ***thehindu.com***, ***wikipedia***,***lifeisavacation***)
(ಚಿತ್ರ ಸೆಲೆ: ***vikrama.in***)

# ಬುಡಕಟ್ಟು ನಡೆಯ ಕುರುಹು – ಮಾರ್ಲಮಿ ಹಬ್ಬ

- ಬರತ್ ಕುಮಾರ್.



ಹಿಂದಿನಿಂದಲೂ ಪ್ರಪಂಚದ ಹಲವು ಬುಡಕಟ್ಟುಗಳಲ್ಲಿ ಒಂದು ನಂಬಿಕೆ ಬೆಳೆದು ಬಂದಿದೆ. ಅದೇನಂದರೆ ಬುಡಕಟ್ಟಿನಲ್ಲಿದ್ದ ಹಿಂದಿನವರು ಬಾಳಿ ಬದುಕಿ ಸತ್ತ ಮೇಲೆಯೂ ಅವರ ಆತ್ಮಗಳು ಇಲ್ಲವೆ ಅವರು ಮಾಡಿದ ಒಳ್ಳೆಯ ಕೆಲಸಗಳು ಈಗಿನವರನ್ನು ಕಾಯುತ್ತಿರುತ್ತವೆ. ಆದ್ದರಿಂದ ಈಗಿನವರು, ಹಿಂದಿನವರನ್ನು ನೆನೆಯುವುದು ಮತ್ತು ಅವರನ್ನು ಪೂಜಿಸುವುದು ಒಂದು ವಾಡಿಕೆಯಾಗಿ ಬೆಳೆದು ಬಂದಿದೆ. ಇಂತಹ ಒಂದು ವಾಡಿಕೆಯ ಕುರುಹೇ 'ಮಾರ್ಲಮಿ' ಹಬ್ಬ. ಈ ಹಬ್ಬದ ಆಚರಣೆಯು ಹೆಚ್ಚಾಗಿ ಮಯ್ಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಕಂಡುಬರುತ್ತದೆ. ಇದನ್ನು 'ಪಕ್ಸ' ಎಂದೂ ಕರೆಯಲಾಗುತ್ತದೆ.

ಇದು ದಸರೆಯ ಈರೇಳ್ನಾಳಿನ ಮೊದಲ ದಿನವಾಗಿ ಬರುತ್ತದೆ. ಅಂದರೆ ವಿಜಯದಶಮಿಗೂ ಹತ್ತು ದಿನ ಮುಂಚೆ ಬರುವ ಅಮವಾಸೆಯಂದು ಈ ಹಬ್ಬವನ್ನು ಆಚರಿಸಲಾಗುತ್ತದೆ. ತೀರಿಹೋದ ತಮ್ಮ ತಮ್ಮ ಹಿರೀಕರ ತಿಟ್ಟಗಳನ್ನು(photo) ಇಟ್ಟು ಅದಕ್ಕೆ ಪಂಚೆ-ಟವಲ್ಲನ್ನು ಉಡಿಸಿ, ಪೂಜೆ ಮಾಡಿ ಆಮೇಲೆ ವಡೆ-ಪಾಯಸ, ಹಣ್ಣು-ಹಂಪಲುಗಳು ಸೇರಿದಂತೆ ಮಾಡಿದ ಅಡಿಗೆಯನ್ನೆಲ್ಲಾ ಬಾಳೆಯೆಲೆಯ ಮೇಲೆ ಬಡಿಸಿ 'ಎಡೆ' ಇಕ್ಕುತ್ತಾರೆ. 'ಎಡೆ' ತೋರಿಸಿದ ಮೇಲೆ ತಮ್ಮ ಹಿರೀಕರ ಸಮಾದಿಯಿದ್ದರೆ, ಅಲ್ಲಿ ಹೋಗಿ ಸೊಡರು ಹಚ್ಚಿ ಪೂಜೆ ಮಾಡಿ ಬರುತ್ತಾರೆ(ಇದಕ್ಕೆ ತಕ್ಕಂತೆ ಕಿಟ್ಟೆಲ್ ಪದನೆರಕೆಯಲ್ಲಿ 'ಎಡೆ' ಎಂಬುದಕ್ಕೆ 'An offering', 'meal', 'food'

ಎಂಬ ಹುರುಳುಗಳನ್ನು ಕೊಡಲಾಗಿದೆ). ಕೆಲವರು, ಹಿರೀಕರಿಗೆ ಇಶ್ಟವಾಗಿದ್ದ ತಿಂಡಿಗಳನ್ನು ಮಾಡಿ ಇಲ್ಲವೆ ಅವರಿಗೆ ಇಶ್ಟವಾಗಿದ್ದ ವಸ್ತುಗಳನ್ನು ಎಡೆಯಲ್ಲಿ ತೋರಿ ಮೆಚ್ಚಿಸುವುದುಂಟು. ಮುಂಚೆಯೇ ಕರೆದಿದ್ದ ಹತ್ತಿರದ ನಂಟರ ಜೊತೆ ಹೊಟ್ಟೆಬಿರಿಯುವಶ್ಟು ಊಟ ಮಾಡುತ್ತಾರೆ. ಈ ಹಬ್ಬದೂಟದಲ್ಲಿ ಕಡ್ಡಾಯವಾಗಿ ವಡೆ-ಪಾಯಸ ಇದ್ದೇ ಇರುತ್ತದೆ. ಕೆಲವರು ನಡುಹೊತ್ತಿಗೆ ಹಬ್ಬವನ್ನು ಮಾಡಿ ಮುಗಿಸಿದರೆ ಇನ್ನು ಕೆಲವರಿಗೆ ಹಬ್ಬ ಇರುಳಿನಲ್ಲಿ ಶುರುವಾಗುತ್ತದೆ. ಬಾಡು ತಿನ್ನುವವರು ಕೊಬ್ಬಿದ ಕುರಿಯನ್ನು ಕಡಿದು ಅದನ್ನು ಎಡೆಯಾಗಿ ತೋರಿದ ಮೇಲೆ ಬರ್ಜರಿ ಬಾಡೂಟವನ್ನು ನಂಟರೊಂದಿಗೆ ಮಾಡುತ್ತಾರೆ.

ಮೇಲಿನ ಆಚರಣೆಯನ್ನು ಗಮನಿಸಿದಾಗ **ಜೇಮ್ಸ್ ಕ್ಯಾಮರೂನ್** ಅವರ '**ಅವತಾರ್'** ಸಿನಿಮಾ ನೆನಪಿಗೆ ಬರುತ್ತದೆ. ಅದರಲ್ಲಿ '**ನಾವಿ'** ಜನಾಂಗದ ತಮ್ಮ ಹಿರಿಯರ 'ಸ್ಪಿರಿಟ್'ಗಳೇ ತಮ್ಮನ್ನು ಕಾಯುತ್ತವೆ ಮತ್ತು ದಾರಿತೋರುಗರಾಗಿ ಕೆಲಸ ಮಾಡುತ್ತಿರುತ್ತವೆ ಎಂಬ ನಂಬಿಕೆಯನ್ನು ಗಮನಿಸಬಹುದಾಗಿದೆ. ತಮ್ಮ ಬುಡಕಟ್ಟಿನ ಹುಟ್ಟಿಗೆ ಹಿಂದಿನವರೇ ಕಾರಣವಾದುದ್ದರಿಂದ ಬುಡಕಟ್ಟಿನಲ್ಲಿ ಅವರ ಬಗೆಗಿನ ಬಕ್ತಿಬಾವ ತಾನಾಗಿಯೇ ಬೆಳೆದು ಬಂದಿರುವುದರಲ್ಲಿ ಅಚ್ಚರಿಯೇನಿಲ್ಲ.

***(ಚಿತ್ರ ಸೆಲೆ:** [flickr.com](flickr.com))*

# ಬೂತಕೋಲ: ಕರಾವಳಿಯ ವಿಶಿಷ್ಟ ನಡೆ-ನುಡಿ

-[ಹರ್ಶಿತ್ ಮಂಜುನಾತ್].



ನಮ್ಮ ನಾಡು ಬಹುಬಗೆಯ ನಂಬಿಕೆಯ ತವರು. ಪ್ರತಿ ನಂಬಿಕೆಯು ಅದರದ್ದೇ ಆದ ಹಿರಿತನವನ್ನು ಹೊಂದಿರುತ್ತದೆ. ಅಂತೆಯೇ ಕರ್ನಾಟಕದ ಕರಾವಳಿ ನಗರಗಳಾದ ಮಂಗಳೂರು, ಉಡುಪಿ ಸುತ್ತಮುತ್ತ ಸೇರಿದಂತೆ ಕೇರಳದ ಗಡಿಬಾಗಗಳ ವರೆಗೂ ವಿಸ್ತಾರವಾಗಿ ಹರಡಿರುವ ಬೂತಾರಾದನೆ ಎಂಬ ಪುರಾತನವಾದ ದಯ್ವೀಕ ನಂಬಿಕೆ, ಕರ್ನಾಟಕದ ಸಂಸ್ಕ್ರುತಿಕ ಸೊಗಡುಗಳಲ್ಲೊಂದು. ನನ್ನ ಎಳವೆಯ ಬಹು ಪಾಲು ಕರ್ನಾಟಕದ ಕರಾವಳಿ ತೀರದಲ್ಲಿಯೇ ಕಳೆದದ್ದರಿಂದ, ಇಲ್ಲಿನ ಸಾಂಸ್ಕ್ರುತಿಕ ಶ್ರೀಮಂತಿಕೆಯ ಕುರಿತು ಅರಿತುಕೊಂಡಿದ್ದೇನೆ. ಅಂತೆಯೇ ಈ ಕೋಲ ನೇಮವೆಂಬ ನಂಬಿಕೆಯ ಕುರಿತೂ ಕೂಡ.

ನೇಮ, ಕೋಲ ಎಂಬೆಲ್ಲಾ ಹೆಸರುಗಳ ಮೂಲಕ ಚಾಲ್ತಿಯಲ್ಲಿರುವ ಈ ನಂಬಿಕೆ ಬೂತಾರಾದನೆಯ ಪ್ರಕ್ರಿಯೆಯಶ್ಟೆ. ನಮ್ಮಲ್ಲಿ ಈ 'ಬೂತ' ಎಂಬ ಪದ ತುಸು ರುಣಾತ್ಮಕ ಯೋಚನೆಗಳನ್ನು ಕೊಡುತ್ತದೆ. ಆದರೆ ನಂಬುವವರು ಮಾತ್ರ ಇದನ್ನು ಬೂತ ಎಂಬುವುದರ ಬದಲು 'ದಯ್ವ'(ದಯ್ವ ಎಂದು ತುಳುವಿನಲ್ಲಿ ಕರೆಯುತ್ತಿದ್ದು, ಇದರ ಕನ್ನಡದ ಹುರುಳು 'ಬೂತ' ಎಂದು) ಎಂದೇ ಕರೆಯುವುದು. ಅಲ್ಲದೇ ದಯ್ವ ಎಂಬುವುದು ಇಲ್ಲಿ ದೇವರ ಸಮಾನ. ಕಾರಣ ದಯ್ವಗಳು ಹಿಂದೆ ಶಿವನ ದೇವಗಣದಲ್ಲಿದ್ದವರು ಎಂಬ ನಂಬಿಕೆ ಇವರದು.

ಇವರ ಪ್ರಕಾರ ಸಾವಿರದ ಒಂದು ಬೂತಗಳು ಅಸ್ತಿತ್ವದಲ್ಲಿದೆ ಎಂಬುದು ನಂಬಿಕೆ. ಅವುಗಳಲ್ಲಿ ಕೆಲವು ದಯ್ವಗಳು ಮಾತ್ರ ಹೆಚ್ಚು ಹೆಸರವಾಸಿಯಾಗಿದ್ದು, ಬಹುಮಂದಿಯಿಂದ ಪೂಜಿಸಲ್ಪಡುತ್ತವೆ. ಉದಾಹರಣೆಗೆ ಶ್ರೀ ಕೊಡಮನಿತ್ತಾಯ, ಅಣ್ಣಪ್ಪ ಪಂಜುರ್ಲಿ, ಶ್ರೀ ಕಾಂತೇರಿ ಜುಮಾದಿ, ಶ್ರೀ ಸರಳ ಜುಮಾದಿ, ಶ್ರೀ ಕಲ್ಕುಡ ಕಲ್ಲುರ್ಟಿ, ಶ್ರೀ ಮಂತ್ರ ದೇವತೆ, ಸ್ವಾಮಿ ಕೊರಗಜ್ಜ, ಸ್ವಾಮಿ ಜಾರಾಂದೇಯ, ಪಿಲಿ ಚಾಮುಂಡಿ, ಶ್ರೀ ಮಹಿಶಾಂತಾಯ, ರಾಹು ಗುಳಿಗಾ, ಸತ್ಯ ದೇವತೆ, ವರ್ತೆ ಪಂಜುರ್ಲಿ, ಬಬ್ಬರ್ಯ, ಶ್ರೀ ದೂಮಾವತಿ, ಸರಳ ದೂಮಾವತಿ, ಮಲರಾಯ, ತೂಕತ್ತೇರಿ ಮೊದಾಲಾದವುಗಳು.

ವಿಶೇಶವೆಂದರೆ ಈ ದಯ್ವಗಳನ್ನು ಎಲ್ಲಾ ಜನಾಂಗದವರೂ ನಂಬುತ್ತಾರೆ. ಹಾಗಾಗಿ ಇಂತಹ ದಯ್ವಗಳು ಕೂಡು ಕುಟುಂಬಗಳಿಂದ ಪೂಜಿಸಲ್ಪಡುತ್ತವೆ. ಆದರೆ ಈ ಎಲ್ಲಾ ದಯ್ವಗಳನ್ನು ಎಲ್ಲಾ ಕುಟುಂಬದವರು ನಂಬಬೇಕು ಅತವಾ ಪೂಜಿಸಬೇಕೆಂದಿಲ್ಲ. ಬದಲಾಗಿ ಹಿರಿಯರು ನಂಬಿಕೊಂಡು ಬಂದ ಕೆಲವು ದಯ್ವಗಳನ್ನು ಆ ಕುಟುಂಬದ ಮುಂದಿನ ಸದಸ್ಯರು ಪಾಲಿಸುತ್ತಾ ಹೋಗುತ್ತಾರಶ್ಟೆ. ಇದರ ಸಲುವಾಗಿ ವರುಶಕ್ಕೊಮ್ಮೆ ಕುಟುಂಬಸ್ತರೆಲ್ಲ ಸೇರಿ ಅವರವರ ದಯ್ವಗಳಿಗೆ ಸಂಬಂದಪಟ್ಟಂತೆ ಪೂಜಾ ವಿದಿವಿದಾನಗಳನ್ನು ಪೂರಯ್ಸುತ್ತಾರೆ. ಮತ್ತೆ ಕೆಲವರು ಇಂತಿಶ್ಟು ವರುಶಗಳಿಗೊಮ್ಮೆ ಅತವಾ ಹರಕೆಗಳ ಆದಾರಾದ ಮೇಲೆ ನೇಮ ಕೋಲಾಗಳನ್ನು ನಡೆಸಿಕೊಡುವ ಮೂಲಕ ಬೂತಾರಾದನೆಯನ್ನು ಕಯ್ಗೊಳ್ಳುವುದೂ ಉಂಟು.

ಹಾಗೆಯೇ ಇಂತಿಶ್ಟು ಗ್ರಾಮಗಳಿಗೆ ಸಂಬಂದಿಸಿದಂತೆ ಕೆಲವು ದಯ್ವಗಳಿಗೆ ಗುಡಿಗಳನ್ನು ಕಟ್ಟಿಸಲಾಗುತ್ತದೆ. ಅವುಗಳನ್ನು ಹತ್ತುಮಾಗನೆಯ ದಯ್ವಗಳೆನ್ನುವರು. ಅಂದರೆ ಇಲ್ಲಿ ಊರಿನ ಹತ್ತು ಸಮಸ್ತರ ಕೂಡುಕುಳ್ಳುವಿಕೆಯಲ್ಲಿ, ಊರಿನ ಮಂದಿಯ ಸಮ್ಮುಕದಲ್ಲಿ ಕೋಲ ನೇಮಗಳು ಕಾಲ ಕಾಲಕ್ಕೆ ನೆರವೇರುತ್ತದೆ. ಕೆಲವು ಊರಿನಲ್ಲಿ ವರುಶಕ್ಕೊಮ್ಮೆ ಕೋಲ ನಡೆಯುತ್ತದೆ ಇದನ್ನು 'ಕಲ ಇಳಿಯುವುದು' ಎನ್ನುತ್ತಾರೆ (ತುಳುವಿನಲ್ಲಿ 'ಕಲಜಪ್ಪುನು' ಎಂದು. ಕಲ ಎಂಬುದು ಕನ್ನಡದ 'ಕಳ' ಎಂಬ ಪದದಿಂದ ಬಂದಿದೆ. ಕಳ ಎಂದರೆ ಜಾಗ ಎಂದು). ಅಂದರೆ ಹತ್ತು ಸಮಸ್ತರು ಮತ್ತು ಮಂದಿಯ ಸಮ್ಮುಕದಲ್ಲಿ, ಹಿಮ್ಮೇಳಗಳ ಜೊತೆ, ಬೂತ ಕಟ್ಟುವಾತ ಬೂತವನ್ನು ಮಯ್ ಮೇಲೆ ಆಹ್ವಾನಿಸಿಕೊಂಡು ದಯ್ವಸ್ತಾನದಿಂದ ಊರಿನ ಗಡಿವರೆಗೆ ಸಂಚರಿಸುತ್ತವೆ. ಏಕಂದರೆ ಆ ಊರಿನ ಗಡಿಬಾಗದ ವರೆಗೆ ಆ ಊರಿನ ದಯ್ವದ ರಕ್ಶಣೆಗೆ ಒಳಪಟ್ಟಿದ್ದು, ಊರಿನ ಸಮಸ್ತರಿಗೆ ಕಣ್ಗಾವಲಾಗಿರುತ್ತವೆ ಎಂಬುದು ಮಂದಿಯ ನಂಬಿಕೆ.

ಕಲ ಇಳಿಯುವುದರ ಮುಂದಿನ ವರುಶ ಆ ಸ್ತಾನದ ಕೋಲ ನೇಮಗಳು ನೇರವೇರುತ್ತವೆ. ಅಲ್ಲದೇ ಪ್ರತಿದಿನದ ಪೂಜೆ ಮತ್ತು ಸಂಕ್ರಾಂತಿಯಂತಹ ವಿಶೇಶ ದಿನಗಳಲ್ಲೂ ಇಲ್ಲಿ ಪೂಜೆಗಳು ನಡೆಯುತ್ತವೆ. ಆ ಪೂಜೆಗಳನ್ನು ನೆರವೇರಿಸಿಕೊಡಲು ಊರಿನವರೆಲ್ಲ ಸೇರಿ ತಮ್ಮೊಳಗೊಬ್ಬನನ್ನು ಪೂಜೆ ಮಾಡಲು ನೇಮಿಸಿರುತ್ತಾರೆ.

ಬಾಳೆಗೊನೆ ಕಡಿಯುವುದರ ಮೂಲಕ ಮೊದಲ್ಗೊಂಡು, ಕೊನೆಯಲ್ಲಿ ಪ್ರಸಾದ ವಿತರಣೆವರೆಗೆ, ಒಟ್ಟು ಹದಿನಾರು ಬಗೆಯ ವಿದಿವಿದಾನಗಳನ್ನು ಒಳಗೊಂಡು ಸಾಗುವ ಈ ಕೋಲ ಎಂಬ ಸಾಂಸ್ಕ್ರುತಿಕ ಆಚರಣೆಯು, ಕೊನೆ ಕ್ಶಣದವರೆಗೂ ನೋಡುಗರನ್ನು ತನ್ನಲ್ಲಿಯೇ ಹಿಡಿದಿಟ್ಟುಕೊಳ್ಳುವುದು ಇದರ ಹಿರಿಮೆ. ಕೋಲ ಶುರುವಾಗುವ ಮೊದಲು ದಯ್ವದ ಬಂಡಾರಕ್ಕೆ ಪೂಜೆ ಮಾಡುವವರಿಂದ ಪೂಜೆ ಮಾಡಿಸಲಾಗುತ್ತದೆ. ಈ ಕೋಲಗಳ ಪ್ರಕ್ರಿಯೆಗಳಲ್ಲಿ ಬಂಡಾರದ ಪೂಜೆಯೂ ಒಂದು. ಬಂಡಾರ ಎಂದರೆ ಬೂತ ಕೋಲದ ಹೊತ್ತಲ್ಲಿ ದರಿಸುವ ಚಿನ್ನ, ಬೆಳ್ಳಿಯಂತಹ ಆಬರಣಗಳು, ಮಣಿಗಂಟೆ, ಕಡ್ಸಲೆ, ಮುಕವಾಡ ಮತ್ತು ದಯ್ವಕ್ಕೆ ಸಂಬಂದಪಟ್ಟ ಕೆಲವು ವಸ್ತುಗಳು. ಇವುಗಳನ್ನು ಇಡಲು ಸ್ತಾನದಲ್ಲಿಯೇ ಒಂದು ಕೋಣೆಯನ್ನು ಮಾಡಿರುತ್ತಾರೆ. ಅದನ್ನು ಬಂಡಾರ ಕೋಣೆ ಎನ್ನುವರು.

ಬಂಡಾರ ಪೂಜೆ ಮುಗಿದ ಕೂಡಲೆ ತಾಸೆ, ಕೊಂಬುಗಳು ಸದ್ದಿಡುತ್ತವೆ. ಮೊದಲು ಪೂಜೆ ಮಾಡುವವರು ಬೂತವನ್ನು ಆಹ್ವಾನಿಸಿಕೊಂಡು, ಬೂತದ ಮುಕವಾಡ ಹಿಡಿದು ಹೊರಬರುತ್ತಾನೆ. ಸ್ತಾನದ ಎದುರು ತಾತ್ಕಾಲಿಕವಾಗಿ ತೆಂಗಿನಮರದ ತುದಿಯ ಗರಿಗರಿಗಳಿಂದ ಚಪ್ಪರವನ್ನು ಮಾಡಲಾಗಿರುತ್ತದೆ. ಹೀಗೆ ಪೂಜೆ ಮಾಡುವವರು ಬಂಡಾರದಿಂದ ತಂದ ಮುಕವಾಡವನ್ನು ಆ ಚಪ್ಪರದಡಿ ಇಟ್ಟು ಅದಕ್ಕೆ ಕೆಲವು ಪೂಜೆಯ ವಿದಿವಿದಾನಗಳನ್ನು ಮಾಡುತ್ತಾರೆ. ಬಳಿಕ ಬೂತದ ವೇಶ ಹಾಕುವವನಿಗೆ ಎಣ್ಣೆ, ವೀಳ್ಯ ನೀಡಿ ಆ ಗುತ್ತಿನ

ಯಜಮಾನನು ಅಪ್ಪಣೆಯನ್ನು ಕೊಡುತ್ತಾನೆ. ಇಲ್ಲಿಂದ ಬೂತ ಪಾತ್ರದಾರಿಯ ಮುಕ್ಯ ಬೂಮಿಕೆಯಲ್ಲಿ ಕೋಲದ ಮುಂದಿನ ಪ್ರಕ್ರಿಯೆಗಳು ಕಯ್ಗೊಳ್ಳುತ್ತದೆ.

ಈ ಕೋಲದ ಮುಕ್ಯ ಆಕರ‍್ಶಣೆ ಬೂತದ ವೇಶ. ಮುಕದ ತುಂಬೆಲ್ಲ ಬಣ್ಣ ಬಳಿದುಕೊಂಡು, ತಲೆಗೆ ಅಣಿ ಕಟ್ಟಿ, ಕಾಲಿಗೆ ಗಗ್ಗರ ಕಟ್ಟಿ, ಸೊಂಟಕ್ಕೆ ಜಕ್ಕಲಣಿಯಂತಹ ಅಲಂಕಾರಿಕ ವಸ್ತುಗಳನ್ನು ಬಳಸಿಕೊಂಡು, ಒಂದು ಕಯ್ಯಲ್ಲಿ ಕಡ್ಗ, ಕತ್ತಿಯಂತಹ ಆಯುದಗಳನ್ನು ಹಿಡಿದುಕೊಂಡು, ಮತ್ತೊಂದು ಕಯ್ಯಲ್ಲಿ ಗಂಟೆಯನ್ನು ಹಿಡಿದುಕೊಂಡು, ಚಿನ್ನ ಬೆಳ್ಳಿಯಂತಹ ಆಬರಣಗಳನ್ನು ದರಿಸಿಕೊಂದು, ಮುಕವಾಡವನ್ನು ಹಾಕಿಕೊಂಡು, ವೇಶದಾರಿಗಳು ದಯ್ವವನ್ನು ಮಯ್ ಮೇಲೆ ಆಹ್ವಾಹಿಸಿಕೊಂಡು ಆವೇಶಬರಿತವಾಗಿ ಕುಣಿಯುವುದೇ ಒಂದು ಸೊಗಸು.



ಆ ಕುಣಿತಕ್ಕೆ ಮತ್ತಶ್ಟು ಆವೇಶ ಒದಗಿಸುವುದು ಕುಣಿತಕ್ಕೆ ತಕ್ಕಂತೆ ತಾಳ ಒದಗಿಸುವ ತಾಸೆ, ಡೋಲು, ಕೊಂಬು, ನಾದಸ್ವರದಂತಹ ಹಿಮ್ಮೇಳಗಳು. ಹಿಮ್ಮೇಳ ಮತ್ತು ಗಗ್ಗರದ ಸದ್ದು, ದಯ್ವದ ರೋಶಬರಿತ ಕೂಗುಗಳಂತಹ ಒಂದು ಪ್ರಕ್ರಿಯೆ ಒಂದು ಹೊಸ ವಾತಾವರಣವನ್ನು ಹುಟ್ಟುಹಾಕುವುದಲ್ಲದೇ, ನೋಡುಗರನ್ನು ಬಾವುಕರನ್ನಾಗಿಸುವುದರ ಜೊತೆ ಕೊಂಚ ಬಯವನ್ನೂ ಹುಟ್ಟಿಸುತ್ತದೆ. ಏಕೆಂದರೆ ಕೆಲವು ದಯ್ವಗಳು ಹಸಿ ಕೋಳಿಗಳನ್ನು ಪುರಿಯನ್ನು ತಿನ್ನುವುದು, ಮತ್ತು ಮಂದಿಯ ಕಡೆಗೆ ಆವೇಶವಾಗಿ ಓಡಿ ಬರುವುದೆಲ್ಲಾ ನಡೆದಾಗ ಸಹಜವಾಗಿಯೇ ಮಂದಿ ಹೆದರುತ್ತಾರೆ.

ಸುಮಾರು ತಡರಾತ್ರಿಯ ಹೊತ್ತಿನಲ್ಲಿ ಶುರುವಾಗುವ ಕೋಲವು, ಮರುದಿನ ಬೆಳಗ್ಗೆ ಅತವಾ ಮದ್ಯಾಹ್ನದ ವರೆಗೂ ಸಾಗುವುದುಂಟು. ಅಂದ ಮಾತ್ರಕ್ಕೆ ಇದು ಅಂದುಕೊಡಶ್ಟು ಸುಲಬವಲ್ಲ. ಏಕೆಂದರೆ ಬಾರಿ ಕೂಗಿಟ್ಟುಕೊಂಡು ಗಂಟೆಗಟ್ಟಲೆ ಕುಣಿಯುವುದೆಂದರೆ ಅದು ಸಾಮಾನ್ಯ ವಿಶಯವಲ್ಲ. ಅದರಲ್ಲೂ ವೇಶದಾರಿಯ ತಾಳ್ಮೆ, ಹುರುಪು ಮತ್ತು ಕಲೆಗೆ ಹಿಡಿದ ಕನ್ನಡಿಯಾಗಿರುತ್ತದೆ. ತಡರಾತ್ರಿಯಿಂದ ಬೆಳಗಿನವರೆಗೆ ಮೂರರಿಂದ ನಾಲ್ಕು ದಯ್ವಗಳು ಬೂತದ ವೇಶ ಹಾಕಿದವರ ಮೇಲೆ ಆಹ್ವಾನವಾಗುತ್ತದೆ.

ವಿಶೇಶವೆಂದರೆ ಕೆಲವೊಮ್ಮೆ ಒಂದು ದಯ್ವಕ್ಕೆ ವೇಶಹಾಕುವವರು ಇನ್ನೊಂದು ದಯ್ವಕ್ಕೂ ಬೂತ ಕಟ್ಟುವುದುಂಟು. ಮತ್ತೆ ಕೆಲವೊಮ್ಮೆ ಬೇರೆ ಬೇರೆ ದಯ್ವಕ್ಕೆ ಬೇರೆ ಬೇರೆಯವರು ವೇಶ ಹಾಕುವುದೂ ಉಂಟು. ಆದರೆ ಇದು ಕೇವಲ ಆವೇಶದ ಕುಣಿತಕ್ಕೆ ಮೀಸಲಾಗದೆ, ಬೆಳಗಾಗುತ್ತಿದ್ದಂತೆ ಊರಿನಲ್ಲಿ ಯಾವುದೇ ವಿಶಯಕ್ಕೆ ವಿವಾದಗಳಿದ್ದಲ್ಲಿ, ಎರಡೂ ಕಡೆಯವರನ್ನು ಕರೆಸಿ ವಿವಾದವನ್ನು ಇತ್ಯರ‍್ತ ಮಾಡುವುದು, ಊರಿನ ಮಂದಿಯಲ್ಲಿ ಯಾವುದೇ ಸಂಕಶ್ಟ ಅತವಾ ಗೊಂದಲಗಳಿದ್ದಲ್ಲಿ ಪರಿಹಾರ ನೀಡುವುದು, ಮತ್ತು ಕೆಲವು ವಿಶಯಕ್ಕೆ ಸಂಬಂದಪಟ್ಟಂತೆ ನ್ಯಾಯ ತೀರ‍್ಮಾನಗಳನ್ನು ಬೂತ ವೇಶದಾರಿಯಿಂದ ಮಾಡಿಸಲಾಗುತ್ತದೆ. ಇಂತಹ ವಿಚಾರಣೆಗಳನ್ನು ಹೆಚ್ಚಾಗಿ ಆ ಕುಟುಂಬದ ಅತವಾ ಆ ಊರಿನ ಮುಕ್ಯ ದಯ್ವವನ್ನು ಆಹ್ವಾಹಿಸಿ ಕೊಂಡವನಿಂದಲೇ ಮಾಡಿಸಲಾಗುತ್ತದೆ.

ಜೊತೆಗೆ ಊರಿನ ಮಂದಿ ಹರಕೆಯ ಹೆಸರಿನಲ್ಲಿ ಕೊಡುವ ಕೋಳಿಗಳನ್ನು, ಎಳನೀರುಗಳನ್ನು, ಸೀರೆ ಪಂಚೆಗಳಂತಹ ಬಟ್ಟೆಗಳನ್ನು, ಚಿನ್ನ ಬೆಳ್ಳಿಯಂತಹ ಆಬರಣಗಳನ್ನು ಪಡೆದುಕೊಂಡು, ಊರಿನ ಎಲ್ಲಾ ಮಂದಿಗೆ ಅಬಯ ನೀಡಿ ಹರಸುವ ಮೂಲಕ ಕೋಲವು ಕೊನೆಯ ಹಂತ ತಲುಪುತ್ತದೆ. ಹೀಗೆ ಎಲ್ಲಾ ವಿದಿವಿದಾನಗಳು ಮುಗಿದ ಬಳಿಕ ಮುಕಂಡರ ಸಮ್ಮುಕದಲ್ಲಿ, ಅವರ ಅಪ್ಪಣೆಯಂತೆ ದಯ್ವವು ಬೂತದ ವೇಶ ಹಾಕಿದವರ ಮಯ್ ಬಿಟ್ಟು ಮತ್ತೆ ತನ್ನ ಸ್ತಾನಕ್ಕೆ ಹಿಂದಿರುಗುವ ಮೂಲಕ ಕೋಲವೆಂಬ ವಿಶಿಶ್ಟ ಸಂಸ್ಕ್ರುತಿಗೆ ತೆರೆಬೀಳುತ್ತದೆ.

***(ಚಿತ್ರ ಸೆಲೆ: youtube, flickr)***

# ಯಕ್ಶಗಾನ – ಕರುನಾಡ ಸಿರಿಕಲೆ

- ಹರ್ಶಿತ್ ಮಂಜುನಾತ್.



ಕರ್ನಾಟಕ! ಮೊದಲಿನಿಂದಲೂ ನಮ್ಮದೇ ಆದ ಹೆಗ್ಗಳಿಕೆಯ ನಡೆನುಡಿಯ ಹಲತನಕ್ಕೆ ಹೆಸರು. ಅದರಲ್ಲೂ ಕರ್ನಾಟಕದ ಕರಾವಳಿಯ ಬಾಗ ಬಹಳಶ್ಟು ಬಗೆಯ ಸಾಂಪ್ರದಾಯಿಕ ನಡೆನುಡಿಯ ಮುಂದಾಳ್ತನವನ್ನು ವಹಿಸಿಕೊಂಡು ಮುಂದೆ ಸಾಗುತ್ತಿದೆ. ಕಂಬಳ, ನಾಗಮಂಡಲ, ಕೋಲ, ಬೂತಾರಾದನೆ ಹೀಗೆ ಇವುಗಳ ಜೊತೆಗೆ ಕನ್ನಡಿಗರ ಗಂಡುಕಲೆ ಎಂದು ಕರೆಸಿಕೊಳ್ಳುವ 'ಯಕ್ಶಗಾನ' ಇಲ್ಲವೇ 'ಬಯಲಾಟ' ಕೂಡ ನಮ್ಮ ನಡೆನುಡಿಯ ಬಾಗವಾಗಿದೆ. ಬಯಲಾಟ ಎಂಬುದು ಯಕ್ಶಗಾನದ ಮೂಲ ಹೆಸರು.

ಇಂದು ಬಯಲಾಟವೂ ಕರ್ನಾಟಕದಲ್ಲಿ ಹೆಮ್ಮರವಾಗಿ ಬೆಳೆದು ನಿಂತಿರುವ ಕಲೆಗಳ ಬಗೆಗಳಲ್ಲಿ ಒಂದು. ಈಗಾಗಲೇ ಸಾಕಶ್ಟು ಹೊತ್ತಗೆಗಳಿಗೆ ಮತ್ತು ಅರಕೆಯ ಬರಹಗಳಿಗೆ ಬರವಣಿಗೆಯ ವಿಶಯವಾಗಿ, ಕಲೆಯನ್ನು ಆರಾದಿಸುವವರಿಗೆ ಮುಕ್ಯ ನೆಲೆಯಾಗಿ, ನಂಬಿ ಬಂದ ಕಲಾವಿದರಿಗೆ ತುತ್ತು ಅನ್ನದ ದಾರಿಯಾಗಿ, ಕನ್ನಡಿಗರ ಹೆಮ್ಮೆಯಾಗಿ ನಮ್ಮ ಮುಂದೆ ನಿಂತಿದೆ. ಅಂತಹ ಒಂದು ವಿಶಿಶ್ಟ ನಡೆನುಡಿಯ ಹುಟ್ಟಿನ ಮೂಲ, ಪರಂಪರೆ, ನಲ್ಬರಹ, ಹಿನ್ನಡವಳಿ ಮತ್ತು ಬೆಳೆದು ಬಂದ ದಾರಿಯ ಕಡೆ ಬೆಳಕು ಚೆಲ್ಲುವ ಒಂದು ಸಣ್ಣ ಪ್ರಯತ್ನವೇ ಈ ಬರಹ.

ಹಲವು ಬಗೆಗಳನ್ನು ಹೊಂದಿರುವ ಬಯಲಾಟದ ಎಲ್ಲಾ ವಿಶಯಗಳನ್ನು ಒಟ್ಟಾಗಿ ತಿಳಿಸಿಕೊಡುವ ಹೊತ್ತಗೆಗಳು ಇನ್ನೂ ಬಂದಿಲ್ಲ. ಈವರೆಗೆ ಬಂದಿರುವ ಬಹಳಶ್ಟು ಹೊತ್ತಗೆಗಳು ಮತ್ತು ಬರಹಗಳು ಬಯಲಾಟದ ಕಲೆಯ ಕೆಲವು ವಿಚಾರಗಳ ಕುರಿತು ನಡೆಸಿದ ಕಲಿಕೆಯ ಬರಹಗಳು ಮಾತ್ರ. ಇವುಗಳಲ್ಲಿ ಹೆಚ್ಚಿನ ಬರಹಗಳು **ಶಿವರಾಮ ಕಾರಂತ**ರ 'ಯಕ್ಶಗಾನ ಬಯಲಾಟ' ಕ್ರುತಿಯಿಂದ ಪ್ರಬಾವಿತವಾದದ್ದು. ಈ ಬರಹಗಳಲ್ಲಿಯೂ ಕಾರಂತರ ಬರಹದ ಸಾಕಶ್ಟು ವಿಚಾರಗಳನ್ನು ಆರಿಸಿಕೊಳ್ಳಲಾಗಿದೆ. ಒಂದರ್‍ತದಲ್ಲಿ ಹೇಳುವುದಾದರೆ ಶಿವರಾಮ ಕಾರಂತರ 'ಯಕ್ಶಗಾನ ಬಯಲಾಟ' ಹೊತ್ತಗೆಯೇ ಬಯಲಾಟ ಕುರಿತ ಬರಹಗಳ ತಳಹದಿ.

ಸುಮಾರು ಹದಿನಾರನೇ ನೂರೇಡಿನಿಂದ ಆಟ, ದಶಾವತಾರ, ಬಯಲಾಟ ಎಂದು ಹಲವು ಹೆಸರುಗಳಿಂದ ಹೆಸರುವಾಸಿಯಾಗಿರುವ ಕನ್ನಡದ ವಿಶಿಶ್ಟ ನಡೆನುಡಿಯ ಈಗಿನ ಬಳಕೆಯ ಹೆಸರು ಬಯಲಾಟ ಇಲ್ಲವೇ ಯಕ್ಶಗಾನ. ಬಯಲಾಟದ ಬೇರೆ ಬೇರೆ ಪ್ರಾದೇಶಿಕ ರೂಪಗಳು ಮತ್ತು ಬಯಲಾಟದ ಮುಕ್ಯ ಬಗೆಗಳು ಬೆಳೆಸಿದ ನಲ್ಬರಹದ ಬಗೆಗೆ 'ಕನ್ನಡ ಬಯಲಾಟ ಪ್ರಸಂಗಗಳು' ಎಂದು ಹೆಸರು. ಕುಣಿತ, ಹಾಡುಗಾರಿಕೆ, ಮಾತುಗಾರಿಕೆ, ಉಡುಗೆ-ತೊಡುಗೆಗಳನ್ನೊಳಗೊಂಡು ತನ್ನದೇ ನಡೆನುಡಿಯಾಗಿರುವ ಬಯಲಾಟವು, ಕರ್‍ನಾಟಕದ ಕರಾವಳಿ ಜಿಲ್ಲೆಗಳಾದ ದಕ್ಶಿಣ ಕನ್ನಡ, ಉತ್ತರ ಕನ್ನಡ, ಉಡುಪಿ ಬಾಗಗಳಲ್ಲಿ, ಮಲೆನಾಡ ಬಾಗಗಳಾದ ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕಾಸರಗೋಡು ಜಿಲ್ಲೆಗಳಲ್ಲಿ ಹೆಚ್ಚಾಗಿ ಹರಡಿಕೊಂಡಿದೆ. ಈ ಸಾಂಪ್ರದಾಯಿಕ ನಡೆನುಡಿ, ಎಲ್ಲರ ಮನೆಮಾತಾಗಿ ಕರ್‍ನಾಟಕದ ಸಾಂಪ್ರದಾಯಿಕ ಕಲಾ ಬಗೆಗಳಲ್ಲಿ ಅರಿದಾದುದು ಎಂದೆನಿಸಿಕೊಂಡಿದೆ.

ನಮ್ಮ ತೆಂಕಣ ಇಂಡಿಯಾದ ರಂಗಬೂಮಿಯನ್ನೊಮ್ಮೆ ಗಮನಿಸಿದಾಗ ಕೂಚುಪುಡಿ, ನೆಟ್ಟಮೇಳ, ಬಾಗವತ ಮೇಳ, ಬಯಲಾಟ ಮತ್ತು ಕತಕ್ಕಳಿ ಮುಕ್ಯವಾಗಿ ಕಾಣಸಿಗುತ್ತವೆ. ಇವುಗಳಲ್ಲಿ ಕಾಣುವುದು ಹೆಚ್ಚಾಗಿ ಒಂದೇ ರೂಪ ಅಂದರೆ ಹಾಡು ಹೇಳುವುದು ಕುಣಿಯುವುದು ಮತ್ತು ಅದರ ತಿರುಳು ವಿವರಿಸುವುದು. ಒಟ್ಟಾರೆಯಾಗಿ ಹಾಡು, ಕುಣಿತ ಮತ್ತು ತಿರುಳು ವಿವರಣೆಯ ಮೂಲಕ ಕತೆಯನ್ನು ತೋರಿಸುವ ಬಗೆಯೇ ಯಕ್ಶಗಾನ ಇಲ್ಲವೇ ಬಯಲಾಟ.

ಸುಮಾರು ಹದಿನೈದನೇ ನೋರೇಡಿನಲ್ಲಿ ಉತ್ತರ ಕನ್ನಡದಿಂದ **ಆದಿಲ್ ಶಾಹಿ**ಯ ಅರಮನೆಗೆ ಆಟದ ಮೇಳಗಳು ಹೋಗಿದ್ದವು ಎಂದು ಹೇಳಲಾಗುತ್ತದೆ. ರೂಡಿಯಲ್ಲಿಯೂ ಕೆಲವು ಬಾಗವತರನ್ನು 1500ರಲ್ಲಿ ಸನ್ಮಾನಿಸಿದ ದಾಕಲೆಗಳು ಸಿಕ್ಕಿವೆ. ಇದನ್ನೆಲ್ಲಾ ನೋಡಿದಾಗ ಸುಮಾರು ಹದಿನಯ್ದನೇ ನೂರೇಡಿನಲ್ಲಿ ಬಯಲಾಟದ ಬಗೆಯಿತ್ತು ಎಂದು ಹೇಳಬಹುದು. ಒಟ್ಟಾರೆಯಾಗಿ ಸುಮಾರು ಅಯ್ದುನೂರು ವರುಶಗಳ ಬರೆದಿಟ್ಟ ಹಿನ್ನಡವಳಿ ಮತ್ತು 800 ವರುಶಗಳ ಕುರುಹಿನ ಹಳಮೆ ಬಯಲಾಟಕ್ಕಿದೆ.

ಇಂಡಿಯಾದ ಬಹಳಶ್ಟು ಕಲೆಗಳು ದಾರ್‍ಮಿಕ ಹಿನ್ನಲೆಯಿಂದ ಹುಟ್ಟಿಕೊಂಡಂತಹವು. ಅಲ್ಲಲ್ಲಿ ಚೌಕಟ್ಟನ್ನು ಮೀರಿ ಮನರಂಜನೆ, ಕುತೂಹಲ ಇಲ್ಲವೇ ಆಸಕ್ತಿಯ ಬಾಗವಾಗಿರಬಹುದು. ಆದರೆ ಇದು ಇಂದಿನ ವರೆಗೂ ದಾರ್‍ಮಿಕ ಹಿನ್ನಲೆಯನ್ನು ಉಳಿಸಿಕೊಂಡು ಬಂದಿದೆ. ಆದರೆ ಬಯಲಾಟವನ್ನೇ ಹೋಲುವ ಬೇರೆ ಕಲೆಗಳು ಇದಕ್ಕೂ ಮೊದಲು ಇತ್ತು, ಮತ್ತು ಅವುಗಳಿಂದ ಪ್ರಬಾವಿತವಾಗಿ ಬಯಲಾಟ ಹುಟ್ಟಿರಬಹುದು ಎಂಬ ವಾದವು ನಮ್ಮ ನಡುವಿದೆ. ಹಾಗೆಯೇ ಕ್ರಿ.ಶ. 1210 ರಲ್ಲಿ ಸಾಣಗದೇವನ "ಸಂಗೀತ ರತ್ನಾಕರ"ದಲ್ಲಿ ಬಯಲಾಟವನ್ನು ಜಕ್ಕ ಎಂದು ಬರೆದಿದ್ದು ಮುಂದೆ ಅದು ಯಕ್ಕಲಗಾನ ಎಂದು "ಕರೆಯಲ್ಪಟ್ಟಿತು" ಎಂಬ ಅಬಿಪ್ರಾಯವೂ ಇದೆ.

1700 ಬಳಿಕ ಬಯಲಾಟದ ಪ್ರಸಂಗಗಳು ಹೇರಳವಾಗಿ ಬೆಳೆಯತೊಡಗಿದವು. ಹರಿಶ್ಚಂದ್ರ, ನಳ ಚರಿತ್ರೆ, ರುಕ್ಮಿಣಿ ಕಲ್ಯಾಣದಂತಹ ಪ್ರಸಂಗಗಳು ಆ ಹೊತ್ತಿನಲ್ಲಿಯೇ ಕಟ್ಟಿದ್ದು ಎಂಬ ಮಾತಿದೆ. 19ನೇ ನೂರೇಡಿನ ಕೊನೆ ಮತ್ತು 20ನೇ ನೂರೇಡಿನ ಮೊದಲಿನಲ್ಲಿ ಬಹಳಶ್ಟು ಪ್ರಸಂಗಗಳು ಕಟ್ಟಲ್ಪಟ್ಟವು. ಈಗ ಸುಮಾರು 2500 ಪ್ರಸಂಗಗಳು ಬಯಲಾಟದ ಬಗೆಯಲ್ಲಿವೆ. ಅಲ್ಲದೇ ಈ ಪ್ರಸಂಗಗಳಲ್ಲಿ ಸುಮಾರು 5 ರಿಂದ 6 ಲಕ್ಶ ಹಾಡುಗಳನ್ನು ಕಟ್ಟಲಾಗಿದೆ. ವಿಶೇಶವೆಂದರೆ, ಬಯಲಾಟದ ಬಗೆಯನ್ನು ಹೊರತುಪಡಿಸಿದರೆ ಕನ್ನಡದ ಯಾವುದೇ ನಲ್ಬರಹ ಬಗೆಯಲ್ಲಿ ಹಾಡುಗಳನ್ನು ಕಟ್ಟಿಲ್ಲ.

**ಪಾತ್ರದಾರಿಗಳು**



ಬಯಲಾಟದ ಪ್ರಸಂಗದಲ್ಲಿ ಬರುವ ಬೇರೆ ಬೇರೆ ಸನ್ನಿವೇಶಗಳನ್ನು ಅಬಿನಯದ ಮೂಲಕ ಆಡಿ ತೋರಿಸುವವರೇ ಪಾತ್ರದಾರಿಗಳು. ನಾಯಕ, ನಾಯಕಿ, ಕಳನಾಯಕ, ಹಾಸ್ಯ ಕಲಾವಿದನ ಪಾತ್ರ ಸೇರಿದಂತೆ ಆಯಾ ಪ್ರಸಂಗಕ್ಕೆ ಅನುಗುಣವಾಗಿ ಪಾತ್ರಗಳನ್ನು ಆಯ್ಕೆ ಮಾಡಲಾಗುತ್ತದೆ. ಹಾಡು ಮತ್ತು ಕುಣಿತದ ಮೂಲಕ ಅಬಿನಯಿಸಿ ಕತೆಯನ್ನು ವಿವರವಾಗಿ ನೋಡುಗರಿಗೆ ಮುಟ್ಟಿಸುವುದು ಪಾತ್ರದಾರಿಗಳ ಮುಕ್ಯ ಕೆಲಸ. ಆದರೆ ಬಹಳಶ್ಟು ಮಂದಿ ಬಯಲಾಟವನ್ನೇ ತಮ್ಮ ಬದುಕಿನ ಕಸುಬನ್ನಾಗಿಸಿರುವುದೂ ಉಂಟು. ನಮಗೆ ತಿಳಿದಿರುವಂತೆ ಸುಮಾರು 3 ಸಾವಿರ ಹವ್ಯಾಸಿ ಕಲಾವಿದರಿದ್ದಾರೆ. ಕೆರೆಮನೆ **ಶಂಬು ಹೆಗಡೆ, ಶ್ರೀದರ ಬಂಡಾರಿ, ಕುಂಬ್ಳೆ ಸುಂದರ ರಾವ್, ಶೀನ ಬಂಡಾರಿ, ಕುಂಬ್ಳೆ ಶ್ರೀದರ್ ರಾವ್** ಮತ್ತು **ಮಹಾಬಲರಾಯ್** ಇವರೆಲ್ಲ ಬಯಲಾಟದಲ್ಲಿ ಹೆಸರು ಮಾಡಿದ ಕೆಲವು ಕಲಾವಿದರು.

**ಉಡುಗೆ ತೊಡುಗೆ**



ಒಂದರ್‍ತದಲ್ಲಿ ಪಾತ್ರದಾರಿಯ ನಟನೆಗೆ ಮೆರುಗು ತುಂಬುವುದೇ ಇದರ ಉಡುಗೆ ತೊಡುಗೆ. ಆಯಾ ಪಾತ್ರಗಳಿಗೆ ತಕ್ಕಂತೆ ಪಾತ್ರದಾರಿಯ ಉಡುಪನ್ನು ತೀರ್‍ಮಾನಿಸಲಾಗುತ್ತದೆ. ಹೆಚ್ಚಾಗಿ ನಾಯಕ ಮತ್ತು ಕಳನಾಯಕನ ಕೀರಿಟವು ಸಾಮಾನ್ಯ ಪಾತ್ರದಾರಿಯ ಕೀರಿಟಕ್ಕಿಂತ ದೊಡ್ಡದಾಗಿರುತ್ತದೆ. ಹಾಗೆಯೇ ಹೆಣ್ಣಿನ ಪಾತ್ರದಾರಿಯ ಕಿರೀಟವು ತುಂಬಾ ಚಿಕ್ಕದಾಗಿರುತ್ತದೆ. ಆದರೆ ಇವುಗಳಲ್ಲಿ ಬಹಳಶ್ಟು ಬೇರ್‍ಮೆ ಕಾಣುವುದು ತಿಟ್ಟುಗಳ ವಿಚಾರ ಬಂದಾಗ, ಏಕೆಂದರೆ ತೆಂಕುತಿಟ್ಟುಗಳ ಉಡುಪುಗಳು ಬಡಗು ತಿಟ್ಟುಗಳ ಉಡುಪಿಗಿಂತ ತೀರಾ ಬೇರೆಯದಾಗಿರುತ್ತದೆ (ತಿಟ್ಟುಗಳ ಕುರಿತು ಮುಂದಿನ ಬರಹಗಳಲ್ಲಿ ತಿಳಿಯೋಣ).

ಉಡುಪಿನ ಬಳಕೆಯನ್ನು ಬಯಲಾಟದ ಕಲಾವಿದರು ಬೇರೆ ಬೇರೆ ಬಗೆಯಲ್ಲಿ ವಿವರಿಸಿದ್ದಾರೆ. ಕೆಲವರ ಪ್ರಕಾರ ಉಡುಪುಗಳು ಆಯಾ ಪ್ರಾದೇಶಿಕ ರಾಜರು ಆತವಾ ಮಹನೀಯರಿಂದ ಪ್ರಬಾವಿತಗೊಂಡು ಅವರಂತೆಯೇ ಮುಂದುವರಿಸಿರಬಹುದು. ಕೆಲವು ಉಡುಪುಗಳು ತಿಟ್ಟುಗಳಿಂದ ಪ್ರಬಾವಿತಗೊಂಡರೆ ಮತ್ತೆ ಕೆಲವು ಕಲ್ಪನೆಗಳಿಂದ ಕಟ್ಟಿದ ಉಡುಪಿನ ಕಲೆಗಳು.

**ಬಾಗವತಿಕೆ**

ಬಾಗವತಿಕೆಗೆ ಬಾಗವಂತಿಗೆ, ಹಾಡುಗಾರಿಕೆ ಎಂಬ ಬೇರೆ ಬೇರೆ ಹೆಸರುಗಳಿಗೆ ಇವೆ. ಈ ಹಾಡುಗಾರಿಕೆಯು ಬಯಲಾಟದ ಉಸಿರಿದ್ದಂತೆ ಇಲ್ಲಿ ಪಾತ್ರದಾರಿಗಳು ಕತಾಪ್ರಸಂಗವನ್ನು ಕುಣಿದು, ನಟಿಸಿ ತೋರಿಸುವ ಮೊದಲು ಆ ಸನ್ನಿವೇಶವನ್ನು ಹಾಡುಗಾರರು ಹಾಡುವಂತಹ ಕ್ರಮವಿದೆ, ಇದನ್ನೇ ಹಾಡುಗಾರಿಕೆ ಎನ್ನುವುದು. ಪ್ರಸಂಗದ ದಾರಿತೋರುಕರು ಎಂದು ಆಯಾ ಪ್ರಸಂಗದ ಹಾಡುಗಾರರನ್ನು ಕರೆಯುತ್ತಾರೆ. ಹಾಡುಗಾರರು ಸನ್ನಿವೇಶವನ್ನು ಹಾಡುವ ಹೊತ್ತಲ್ಲಿ ಪಾತ್ರದಾರಿಯು ಕುಣಿತದ ಮೂಲಕ ಅಬಿನಯಿಸುತ್ತಾನೆ. ಅಲ್ಲದೇ ಇಲ್ಲಿ ಹಾಡಿಗೆ ತಕ್ಕಂತೆ ಬಾವನೆಗಳನ್ನು ಮುಕದಲ್ಲಿ ಮೂಡಿಸುವುದು ಅಗತ್ಯವಾಗಿರುತ್ತದೆ. ಬಯಲಾಟ ನಡೆಯುವ ಮೇಲೆ ಹೇಳಿದ ಜಿಲ್ಲೆಗಳಲ್ಲಿ ಸುಮಾರು 1000 ಮಂದಿ ಹಿಮ್ಮೇಳದ ಕಲಾವಿದರಿರಬಹುದು ಎಂಬ ಒಂದು ಲೆಕ್ಕಚಾರವೂ ಇದೆ. ಅವರಲ್ಲಿ ಸುಮಾರು 50-60 ಹೆಸರುವಾಸಿ ಹಾಡುಗಾರರಿದ್ದಾರೆ.

**ಹಿಮ್ಮೇಳ**



ಹಿಮ್ಮೇಳವೆಂದರೆ ಚಂಡೆ, ಮದ್ದಳೆ, ಜಾಗಟೆ, ತಾಳ ಮುಂತಾದ ಸಂಗೀತದ ವಾದ್ಯಗಳನ್ನು ಬಳಸಿಕೊಂಡು ಹಾಡುಗಾರಿಕೆ, ಕುಣಿತ ಮತ್ತು ಮಾತುಗಾರಿಕೆಗೆ ಸರಿಯಾಗಿ ಇನಿತವನ್ನು ನೀಡುವುದು. ಹಾಡುಗಾರಿಕೆಯನ್ನು ಬಳಸಿಕೊಳ್ಳುವ ಯಾವುದೇ ಒಂದು ಕಲೆ ಪರಿಣಾಮಕಾರಿಯಾಗಿ ಮೂಡಿಬರಬೇಕಾದರೆ ಅಲ್ಲಿ ಸಂಗೀತ ವಾದ್ಯಗಳ ಬಳಕೆ ಬೇಕೆಬೇಕು, ಇದರಿಂದ ಬಯಲಾಟವು ಹೊರತಾಗಿಲ್ಲ. ಹಾಗಾಗಿ ಬಯಲಾಟದಲ್ಲಿ ಹಾಡು ಕುಣಿತದಶ್ಟೇ ಹಿಮ್ಮೇಳವೂ ಅರಿದಾದುದು.

ಮೇಲೆ ಹೇಳಿದ ವಿವರಗಳು ಬಯಲಾಟದ ಎಲ್ಲಾ ಬಗೆಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಕೆಲವು ಅಂಶಗಳು. ಇಡೀ ಬಯಲಾಟದಲ್ಲಿ ಮುಕ್ಯವಾಗಿ ಎರೆಡು ಬಗೆಗಳಿವೆ. ಈ ಎರೆಡು ಬಗೆಗಳ ನಡುವೆ ಹಲವಾರು ಬೇರ್ಮೆಗಳಿವೆ. ಹಾಗೆಯೇ ಮೊದಲೇ ಹೇಳಿದಂತೆ ಕನ್ನಡಿಗರ ಗಂಡು ಕಲೆ ಅನಿಸಿಕೊಳ್ಳುವುದಕ್ಕೂ ಮೊದಲು ಬಯಲಾಟದ ಹುಟ್ಟು ಹರಿವಿನಲ್ಲಿ ಕೆಲವು ಗೊಂದಲಗಳಿವೆ. ಹಾಗದರೆ ಈ ಬಯಲಾಟ,

ಕರ್ನಾಟಕಕ್ಕೂ ಮೊದಲು ಎಲ್ಲಿ ಹುಟ್ಟಿಕೊಂಡಿತ್ತು? ಕರ್ನಾಟಕದ ಕಡೆಗೆ ಎಲ್ಲಿಂದ ಮತ್ತು ಹೇಗೆ ಹರಿಯಿತು? ಅವುಗಳ ಬಗೆಗಳೇನು? ಹೀಗೆ ಹಲವಾರು ವಿಶಯಗಳನ್ನು ಮುಂದಿನ ಬರಹದಲ್ಲಿ ಅರಿಯೋಣ.

(*ಚಿತ್ರ ಸೆಲೆ:* ***traveltalkindia, nripulse.com, dreamcolors.in, yakshadhwani***)

# ಕರುನಾಡ ಕಲೆ ಕಂಬಳ(ಕಂಬುಲ)

-ಹರ್ಷಿತ್ ಮಂಜುನಾತ್.



ಕರುನಾಡ ಪಾರಂಪರಿಕವಾಗಿ ತನ್ನದೇ ಆದ ವಿಶಿಷ್ಟ ಕಲೆ, ಸಂಸ್ಕೃತಿ, ಹಾಗೂ ಮೇಲ್ತನಕ್ಕೆ ತನ್ನದೇ ಆದ ನೆಲೆಗಟ್ಟನ್ನು ಕಟ್ಟಿಕೊಂಡು ವಿಶ್ವದೆಲ್ಲೆಡೆ ರಾರಾಜಿಸುತ್ತಿರುವುದು ನಮಗೆ ಹೆಮ್ಮೆಯ ವಿಶಯ. ಹೀಗೇ ಕರ್ನಾಟಕದ ಹಳೆಯ ಸಾಂಸ್ಕೃತಿಕ ಕ್ರೀಡೆಗಳಲ್ಲಿ ಕಂಬಳವೂ ಒಂದು. ಕರ್ನಾಟಕದ ಕರಾವಳಿ ದಕ್ಶಿಣ ಕನ್ನಡ ಜಿಲ್ಲೆಯಲ್ಲಿ , ಬೇಸಾಯವೇ ಮುಕ್ಯವಾದ ಸಮಾಜದಲ್ಲಿ ಕೋಳಿ ಮತ್ತು ಕೋಣಗಳು ಬದುಕಿನೊಂದಿಗೆ ಹುದುಗಿಹೋಗಿವೆ. ಬೇಸಾಯಗಾರರು ಬತ್ತದ ಗದ್ದೆಗಳಲ್ಲಿ ಉತ್ತಿದ ಬಳಿಕ ಕೋಣ ಎತ್ತುಗಳನ್ನು ಓಡಿಸುತ್ತಿದ್ದ ಆಚರಣೆ ಮತ್ತು ಆಟ 'ಕಂಬಳ'. ಕಂಬಳ ಅತವಾ ತುಳು ಬಾಶೆಯಲ್ಲಿ ಹೇಳುವಂತೆ 'ಕಂಬುಲ' ಎಂದರೆ ಉಳುವುದಕ್ಕೆ ಮತ್ತು ಬೀಜಗಳ ಬಿತ್ತನೆಗೆ ಸಿದ್ದವಾಗಿರುವ ಕೆಸರುಗದ್ದೆ ಎಂದೇ ಹುರುಳು. ಕೆಸರುಗದ್ದೆಯಲ್ಲಿ, ಬಾಕಿಮಾರು ಗದ್ದೆಯಲ್ಲಿ, ಕಂಬಳ ಗದ್ದೆಯಲ್ಲಿ ದಪ್ಪನೆ ಮಯ್ಯ, ಸಾಕಿದ ಕೋಣಗಳನ್ನು ಓಡಿಸುವುದು ಒಂದು ಮನೋರಂಜನೆ ಆಟ.

ಕರಾವಳಿ ಕರ್ನಾಟಕದ ಜನಪದ ಆಚರಣೆಗಳಲ್ಲಿ ಕಂಬಳ ವಿಶಿಶ್ಟವಾದುದು. ಆದರೆ ಇದು ಕೇವಲ ಕೋಣಗಳ ಓಟದ ಪಯ್ಪೋಟಿಯಲ್ಲ. ಇದೊಂದು ದಾರ್ಮಿಕ ಹಾಗೂ ಪಲವಂತಿಕೆಯ ಆಚರಣೆಯೂ ಆಗಿದೆ. ಕಂಬಳಕ್ಕೆ ಅದರದ್ದೇ ಆದ ಸಾಂಸ್ಕೃತಿಕ, ಸಾಮಾಜಿಕ, ದಾರ್ಮಿಕ ಹೆಚ್ಚುಗಾರಿಕೆ ಇದೆ. ದಕ್ಶಿಣ ಕನ್ನಡ ಮತ್ತು ಈಗಿನ ಉಡುಪಿ ಜಿಲ್ಲೆಯ ಜಾನಪದದೊಂದಿಗೆ ಹಾಸು ಹೊಕ್ಕಾಗಿರುವ ಈ ಆಟ ಕರಾವಳಿಯ

ರಯ್ತಾಪಿ ಜನರು ಬತ್ತದ ಕೊಯಿಲಿನ ನಂತರ ತಮ್ಮ ಮನರಂಜನೆಗೋಸ್ಕರ ಏರ್ಪಡಿಸುತ್ತಿದ್ದ ಈ ಆಟ, ಕಳೆದ ಅನೇಕ ವರುಶಗಳಿಂದ ಸಾಂಗಿಕ ಬಲದೊಂದಿಗೆ ಬೆಳೆಯುತ್ತಿದೆ. ಎರಡು ಕೋಣಗಳ ಕುತ್ತಿಗೆಗೆ ನೊಗ ಕಟ್ಟಿ ಅವುಗಳನ್ನು ಓಡಿಸಲಾಗುವ ಈ ಆಟದಲ್ಲಿ ಕೋಣಗಳೊಂದಿಗೆ ಅವುಗಳನ್ನು ಓಡಿಸುವಾತನ ಪಾತ್ರವೂ ಮುಕ್ಯ. ಕಂಬಳದಲ್ಲಿ ಕೋಣಗಳನ್ನು ಓಡಿಸುವುದು ಬಹುಮಾನ ಪಡೆಯುವುದು ಒಂದು ಪ್ರತಿಶ್ಟೆಯ ವಿಚಾರ ಕೂಡ. ಈಚಿನ ದಿನಗಳಲ್ಲಿ ಕಂಬಳವು ಬಹಳ ಸಿಂಗಾರಗೊಂಡಿದೆ. ಸೋಲು-ಗೆಲುವುಗಳು ಮರ್‍ಯಾದೆಯ ಪ್ರಶ್ನೆಯಾಗಿಬಿಟ್ಟಿವೆ. ಹಾಗಾಗಿ ಕಂಬಳದ ಓಟದ ಕೋಣಗಳನ್ನು ಸಾಕುವುದು ಒಂದು ಗನತೆ, ಅವುಗಳನ್ನು ಸಾಕಲು ಸಾಕಶ್ಟು ಹಣಕಾಸಿನ ಬಲ ಕೂಡ ಬೇಕು.

**ಕಂಬಳ ಆಚರಣೆ ಮತ್ತು ಆಚರಣೆಯ ವಿದಗಳು:**

ಸಾಮಾನ್ಯವಾಗಿ, ಕಂಬಳಗಳು ನವೆಂಬರ್ ಮತ್ತು ಮಾರ್‍ಚ್ ತಿಂಗಳುಗಳ ನಡುವಿನ ಹೊತ್ತಿನಲ್ಲಿ ನಡೆಯುತ್ತವೆ. ಕಂಬಳದಲ್ಲಿ 'ಬಾರೆ ಕಂಬಳ', 'ಪೂಕರೆ ಕಂಬಳ', 'ಅರಸು ಕಂಬಳ' ಮತ್ತು ಈಗ ನಡೆಯುತ್ತಿರುವ 'ಆದುನಿಕ ಕಂಬಳ' ಎಂಬ ನಾಲ್ಕು ಬಗೆಗಳನ್ನು ಗುರುತಿಸಬಹುದು. ಬಾರೆ ಕಂಬಳ ಮತ್ತು ಪೂಕರೆ ಕಂಬಳಗಳಲ್ಲಿ ಕೋಣಗಳ ಪಂದ್ಯಕ್ಕಿಂತ, ಇತರ ಆಚರಣೆಗಳಿಗೆ ಬಹಳ ಹೆಚ್ಚುಗಾರಿಕೆಯಿದೆ. ಬಾರೆಕಂಬಳದಲ್ಲಿ, ಗದ್ದೆಯ ನಡುವೆ ಒಂದು ಬಾಳೆಯ ಗಿಡವನ್ನು ನೆಡುವುದೇ ಬಹಳ ಮುಕ್ಯ. ಕೋಣಗಳ ಓಟ ಕೇವಲ ಸಾಂಕೇತಿಕವಾದುದು. ಅರಸು ಕಂಬಳದಲ್ಲಿ ಆಚರಣೆಗಳು ಮತ್ತು ಪಂದ್ಯ ಎರಡಕ್ಕೂ ಒಂದೇ ಬಗೆಯ ಹೆಚ್ಚುಗಾರಿಕೆ ಇದೆ.

ಆದುನಿಕ ಕಾಲದಲ್ಲಿ, ಆಚರಣೆಗಳು ಹಿನ್ನೆಲೆಗೆ ಸರಿದು, ಪಂದ್ಯಕ್ಕೆ ಇನ್ನಿಲ್ಲದ ಹೆಚ್ಚುಗಾರಿಕೆ ಬಂದಿದೆ. ಕಂಬಳಕ್ಕೆ ಸಂಬಂದಿಸಿದ ಆಚರಣೆಗಳು, ಅದಕ್ಕಾಗಿ ನಿಗದಿ ಪಡಿಸಿರುವ ದಿನಕ್ಕಿಂತ, ಕೆಲವು ದಿನಗಳು ಮುಂಚಿತವಾಗಿಯೇ ಮೊದಲಾಗಿ, ಅದು ಮುಗಿದ ಬಳಿಕವೂ ಮುಂದುವರಿಯುತ್ತವೆ. ಹಳ್ಳಿಯ ಹಿರಿಯರನ್ನು ಕಂಬಳಕ್ಕೆ ಕರೆಯುವುದು, ಕಂಬಳದ ಗದ್ದೆಯನ್ನು ಸಿಂಗರಿಸುವುದು, ಬೇರೆ ಬೇರೆ ಜಾನಪದ ದಯ್ವಗಳನ್ನು ಪೂಜಿಸುವುದು, ಡೋಲು ಕುಣಿತ, ಕೊರಗ ಮತ್ತು ಮುಂಡಾಲದವರು ಹಾಡುವ ಹಾಡುಗಳು ಮತ್ತು ಕೋಣಗಳ ಮೆರವಣಿಗೆ ಇವೆಲ್ಲವನ್ನೂ ವಿಜ್ರಂಬಣೆಯಿಂದ ಆರಾದನೆಯ ಹಾಗೆ ನಡೆಸಲಾಗುವುದು.

ಕೋಣಗಳನ್ನು ಚೆನ್ನಾಗಿ ಅಲಂಕರಿಸಿ ಕೊಂಬು ವಾಲಗದೊಂದಿಗೆ ಮೆರವಣಿಗೆ ಮಾಡಿ ಕಂಬಳ ಗದ್ದೆಯ ಬಳಿ ಕರೆ ತರುತ್ತಾರೆ. ಚೆನ್ನಾಗಿ ಬೆಳೆದ ಕೋಣಗಳ ಮಯ್ ಮಿರಮಿರನೆ ಮಿಂಚುತ್ತದೆ. ಅವುಗಳು ಕೂಡ ಅತ್ಯುತ್ಸಾಹದಿಂದ ಬದಿಯಲ್ಲಿರುವ ಮರವನ್ನು ಕೊಂಬಿನಿಂದ ತಿವಿಯುತ್ತವೆ. ನೆಲದ ಮಣ್ಣನ್ನು ಗೋರಿ ತಲೆ ಮತ್ತು ಹಣೆಯ ಮೇಲೆ ಮೆತ್ತಿಕೊಳ್ಳುತ್ತವೆ ಇವುಗಳನ್ನು ಹಿಡಿತದಲ್ಲಿರಿಸುವುದು ಕೂಡ ಒಂದು ಕಲೆ. ಇವುಗಳ ಮೂಗಿಗೆ ಬಳ್ಳಿ ಸುರಿದು ಮೂಗು ದಾರ ಹಾಕುತ್ತಾರೆ. ಇಲ್ಲವಾದಲ್ಲಿ ಇವನ್ನು ಹಿಡಿತದಲ್ಲಿಟ್ಟು ಕೊಳ್ಳಲು ಸಾದ್ಯವಿಲ್ಲ. ಕೋಣಗಳನ್ನು ಓಡಿಸುವಾತ ಕೂಡ ಕಿರುಗಚ್ಚೆ ಹಾಕಿ ತಲೆಗೆ ರುಮಾಲು ಸುತ್ತಿ ಸಿದ್ದರಾಗಿರುತ್ತಾರೆ. ಕೋಣಗಳು ಓಡಿಕೊಂಡು ಬರುವಾಗ ಜನರ ಬೊಬ್ಬೆ ಕೇಕೆ ಆನಂದಗಳನ್ನು ನೋಡಿಯೇ ಸವಿಯಬೇಕು. ಕೆಲವೊಮ್ಮೆ ಓಡಿಸುವಾತನ ಹಿಡಿತಕ್ಕೆ ಸಿಕ್ಕದೆ ಯರ್‍ರಾ ಬಿರ್‍ರಿ ಓಡುವ ಕೋಣಗಳು ನೋಡಲು ಸೇರಿದ ಜನರ ಕಡೆ ಓಡಿ ಬಂದು ಜನರನ್ನು ದಿಕ್ಕಾಪಾಲಾಗಿ ಓಡಿಸುವುದೂ ಕೂಡಾ ಉಂಟು! ಕೋಣಗಳು ಓಡುವಾಗ ನೀರು ಎತ್ತರಕ್ಕೆ ಚಿಮ್ಮುವುದನ್ನು ನೋಡುವುದು ಒಂದು ವಿಶಿಶ್ಟ ಅನುಬವವನ್ನು ಕೊಡುತ್ತದೆ .

**ಕಂಬಳದ ಗದ್ದೆಯ ಬಗೆಗಳು :**

1. ಒಂಟಿ ಗದ್ದೆಯ ಕಂಬಳ:

ಮೂಡಣ ದಿಕ್ಕು (ಮೂಡಯ್ ಕೆರೆ) ಅತವಾ ಪಡುವಣ ದಿಕ್ಕು (ಪಡ್ಡಯ್ ಕೆರೆ) ಎಂಬ ಎರಡು ಕಣಗಳಿದ್ದು, ಒಂಟಿ ಗದ್ದೆಯ ಕಂಬಳದಲ್ಲಿ ಯಾವುದಾದರೂ ಒಂದು ಕಣದಲ್ಲಿ ಒಂದೊಂದೇ ಜೋಡಿ ಕೋಣಗಳನ್ನು ಓಡಿಸಲಾಗುತ್ತದೆ. ಹೊತ್ತಿನ ಆದಾರದ ಮೇಲೆ ಕೋಣದ ಜೋಡಿಯ ಗೆಲುವನ್ನು ತೀರ್‍ಮಾನಿಸಲಾಗುವುದು. ಈ ಪಯ್ಕಿ ತೋನ್ಸೆ ಪಡುಮನೆ ಕಂಬಳ ಹಳತು ಹಾಗೂ ಹೆಸರುವಾಸಿ.

2. ಜೋಡಿ ಗದ್ದೆಯ (ಜೋಡುಕರೆ) ಕಂಬಳ:

ಜೋಡುಕರೆ ಕಂಬಳಗಳಲ್ಲಿ ಮೂಡಣ ದಿಕ್ಕು (ಮೂಡಯ್ ಕೆರೆ) ಮತ್ತು ಪಡುವಣ ದಿಕ್ಕು (ಪಡ್ಡಯ್ ಕೆರೆ) ಎಂಬ ಅಕ್ಕ ಪಕ್ಕದ ಎರಡು ಕಣಗಳಿದ್ದು ಎರಡರಲ್ಲೂ ಒಟ್ಟಿಗೇ ಕೋಣಗಳನ್ನು ಓಡಿಸಿ ಅವುಗಳ ಮಧ್ಯೆ ಪೈಪೋಟಿ ನಡೆಸಲಾಗುತ್ತದೆ. ಹೆಚ್ಚಾಗಿ ಜೋಡುಕರೆ ಕಂಬಳಗಳಿಗೆ ಪುರಾಣ ಮತ್ತು ಜಾನಪದದಲ್ಲಿ ಸಿಗುವ ಅವಳಿ-ಜವಳಿಗಳ ಅತವಾ ಜೋಡಿಗಳ ಹೆಸರಿಡುವುದು ವಾಡಿಕೆ.

**ಕಂಬಳ ಆಟದ ಬಗೆಗಳು:**

ಕೋಣಗಳ ಓಟದ ಪಯ್ಪೋಟಿಯನ್ನು ನಡೆಸುವ ಬಗೆಯನ್ನು ಅವಲಂಬಿಸಿ ಕಂಬಳದಲ್ಲಿ ನಾಲ್ಕು ಬಗೆಗಳಿವೆ. ಹಗ್ಗದ ಓಟ, ಅಡ್ಡಹಲಗೆ ಓಟ, ನೇಗಿಲ ಓಟ ಮತ್ತು ಕಣೆ ಹಲಗೆ ಓಟ ಎಂಬ ಹೆಸರುಗಳಿಂದ ಅವುಗಳನ್ನು ಕರೆಯುತ್ತಾರೆ. ಹಗ್ಗದ ಓಟದಲ್ಲಿ, ಕೋಣಗಳು ಒಂದು ನೊಗವನ್ನು ಕಟ್ಟಿಕೊಂಡು ಓಡುತ್ತವೆ. ಆ ನೊಗದ ನಡುವಿಗೆ ಕಟ್ಟಿದ ಹಗ್ಗಗಳನ್ನು ಹಿಡಿದುಕೊಂಡಿರುವ ಮನುಶ್ಯನು ಕೋಣಗಳ ಸಂಗಡ ತಾನೂ ಓಡುತ್ತಾನೆ. ಅಡ್ಡ ಹಲಗೆ ಓಟದಲ್ಲಿ ಆ ಮನುಶ್ಯನು, ನೊಗಕ್ಕೆ ಸೇರಿಸಿರುವ ಹಲಗೆಯ ಮೇಲೆ ನಿಂತುಕೊಂಡು ಕೋಣಗಳ ಓಟವನ್ನು ನಿಯಂತ್ರಿಸುತ್ತಾನೆ. ನೇಗಿಲ ಓಟದಲ್ಲಿ ನೊಗದ ಜಾಗದಲ್ಲಿ ನೇಗಿಲು ಇರುತ್ತದೆ. ಇಲ್ಲಿ ಓಡಿಸುಗನು ನೇಗಿಲನ್ನು ಹಿಡಿದಿರುತ್ತಾನೆ. ಆ ನೇಗಿಲಿಗೆ ಕೋಣಗಳನ್ನು ಕಟ್ಟಿರುತ್ತಾರೆ. ಸುಮಾರು ನೂರರಿಂದ ಇನ್ನೂರು ಮೀಟರುಗಳಶ್ಟು ಉದ್ದದ ಓಟದ ಕಣಗಳಲ್ಲಿ ಕಂಬಳ ನಡೆಯುತ್ತದೆ. ಹಸನಾದ ಗದ್ದೆಯ ಮಣ್ಣಿನೊಂದಿಗೆ ಜಿಗುಟಾಗದಿರಲು ತಕ್ಕಶ್ಟು ಮರಳು ಸೇರಿಸಿ ಅದರ ಮೇಲೆ ನೀರು ನಿಲ್ಲಿಸಿ ಮಾಡಿದ ಕೆಸರು ಗದ್ದೆಯೇ ಕಂಬಳ ಓಟದ ಕಣ. ಕಂಬಳದ ಕಣವು ನೆಲ ಮಟ್ಟಕ್ಕಿಂತ ಕೆಲವು ಅಡಿಗಳಶ್ಟು ಆಳದಲ್ಲಿ ಇರುತ್ತದೆ. ಕಣದ ಒಂದು ಕೊನೆಯಲ್ಲಿ ಒಂದು ಬದಿಯಿಂದ ಇಳಿಜಾರಾಗಿ ಕಣದೊಳಕ್ಕೆ ಕೋಣಗಳನ್ನು ಇಳಿಸಲು ದಾರಿ ಇರುತ್ತದೆ. ಅಲ್ಲಿ ಮೇಲೆ ಕಟ್ಟಿದ ಮಾವಿನ ಎಲೆಗಳ ತೋರಣವು ಓಟದ ಆರಂಬದ ಗೆರೆಯನ್ನು ಸೂಚಿಸುತ್ತದೆ. ಕಣದ ಇನ್ನೊಂದು ಕೊನೆಯಲ್ಲಿ ಕಟ್ಟಿದ ಮಾವಿನ ಎಲೆಗಳ ತೋರಣವು ಆಟದ ಕೊನೆಯ ಗೆರೆಯನ್ನು ಸೂಚಿಸುತ್ತದೆ. ಆಟದ ಕೊನೆಯಲ್ಲಿ ಕಣದಿಂದ ಏರಿಯೊಂದನ್ನು ಕಟ್ಟಿರುತ್ತಾರೆ. ಬಿರುಸಾಗಿ ಓಡಿ ಬಂದ ಕೋಣಗಳು ಮಂಜೊಟ್ಟಿ ಎಂದು ಕರೆಯಲಾಗುವ ಆ ಏರಿಯನ್ನೇರಿ ಬಿರುಸು ಕಳಕೊಂಡು ನಿಲ್ಲುತ್ತದೆ (ಅತವಾ ಅವುಗಳನ್ನು ಹಿಡಿದು ನಿಲ್ಲಿಸಲಾಗುತ್ತದೆ). ಪಂದ್ಯದಲ್ಲಿ ಗೆದ್ದ ಜೋಡಿಯ ಒಡೆಯರಿಗೆ ಬಂಗಾರದ ಪದಕ ಮತ್ತು ಶೀಲ್ಡುಗಳನ್ನು ಬಹುಮಾನವಾಗಿ ಕೊಡುತ್ತಾರೆ. ಗೆಲುವನ್ನು ತಂದಿಕೊಟ್ಟ ಕೋಣಗಳಿಗೆ ಬಾಳೇಹಣ್ಣು, ಎಳನೀರು ಮುಂತಾದ ರುಚಿಯಾದ ತಿನುಸು ದೊರೆಯುತ್ತದೆ.

ವಂಡಾರು ಕಂಬಳ, ಪುತ್ತೂರು ದೇವರ ಕಂಬಳ, ಕದ್ರಿ ಕಂಬಳ, ಕೊಕ್ಕಡದ ಕಂಬಳ ಮೊದಲಾದ ಕಂಬಳಗಳ ಉಲ್ಲೇಕ ಹಲವಾರು ತುಳು ಜಾನಪದ ಹಾಡುಗಳಲ್ಲಿ ದೊರೆಯುತ್ತದೆ ಅನೇಕ ಕಲ್ಬರಹಗಳಲ್ಲೂ ಕಂಬಳದ ಬಗ್ಗೆ ಹೆಸರಿಸಲಾಗಿದೆ. ಹೀಗೆ ನೂರಾರು ವರುಶಗಳಿಂದ ಕಂಬಳವು ಜನ ಸಮುದಾಯಗಳನ್ನು ಸೆಳೆಯುತ್ತಾ ಬಂದಿದೆ.

**ಕಂಬಳದ ಹಿನ್ನಲೆ :**

ಕರಾವಳಿಯಲ್ಲಿ ಕಂಬಳದ ಆಚರಣೆ ಸುಮಾರು 800-900 ವರುಶಗಳ ಹಿಂದಿನಿಂದಲೇ ನಡೆದುಕೊಂಡು ಬಂದಿದೆ. ಉಡುಪಿ ತಾಲೂಕಿನ ಕೆಂಜೂರಿನ ಸಮೀಪದ ಕರ್ಜೆ ಎಂಬಲ್ಲಿ ದೊರಕಿದ ಆಳುಪ ರಾಣಿ ಬಲ್ಲಮಹಾದೇವಿಗೆ ಸಂಬಂದಿಸಿದ ಕಲ್ಬರಹದಲ್ಲಿ ಕಂಬಳದ ಬಗ್ಗೆ ಹೇಳಲಾಗಿದೆ. "ಸುಗ್ಗಡಿಯ ಕಂಬಳಕ್ಕೆ ಎರಡು ಎತ್ತು ಕರೆತರಬಹುದು" ಎಂದು ಇದರಲ್ಲಿ ಹೇಳಲಾಗಿದೆ.

1) ಇದರ ಕಾಲ ಕ್ರಿ. ಶ.1200 (ಶಕ ವರುಶ 1281). ಕಂಬಳ ಆಚರಣೆಯು ಸುಗ್ಗಿ ಬೆಳೆಯ ಬಿತ್ತನೆಯ ಸಮಯದಲ್ಲಿ ನಡೆಯುತ್ತದೆ. ಕುಂದಾಪುರ ಕನ್ನಡದಲ್ಲಿ ಸುಗ್ಗಿ ಅಗೇಡಿ ಎಂದರೆ ಸುಗ್ಗಿಯ ನೇಜಿ ಬಿತ್ತುವ ಜಾಗ. ಸುಗ್ಗಿ ಅಗೇಡಿ > ಸುಗ್ಗೇಡಿ > ಸುಗ್ಗಾಡಿ ಎಂದು ಪ್ರಯೋಗವಾಗಿರಬಹುದು ಎಂದು ತಿಳಿವಿಗರು ಅಬಿಪ್ರಾಯಪಟ್ಟಿದ್ದಾರೆ. ಕ್ರಿ. ಶ. ಹನ್ನೆರಡನೆಯ ನೂರೇಡಿನಲ್ಲಿಯೇ ಸುಗ್ಗಿಯ ಕಾಲದಲ್ಲಿ

ಕಂಬಳ ನಡೆಯುತ್ತಿದ್ದದನ್ನು ಕಲ್ಬರಹದ ಹೇಳಿಕೆ ತಿಳಿಸುತ್ತದೆ. ಇದರಿಂದ ಕಂಬಳ ಕನಿಷ್ಠ ಎಂಟುನೂರು ವರುಶಗಳಿಂದ ಆಚರಿಸಲ್ಪಡುತ್ತಾ ಬಂದಿದೆ ಎಂದು ಸ್ಪಶ್ಟವಾಗುತ್ತದೆ. ಕ್ರಿ. ಶ.1402ರ ಬಾರಕೂರು ಕಲ್ಬರಹದಲ್ಲಿ 'ಆ ಗದ್ದೆಯ ಕೆಳಗಿನ ಕಂಬಳ ಬಗ್ಗೆ' ಎಂದು ಹೇಳಲಾಗಿದೆ.

2) ಕ್ರಿ. ಶ. 1421ರ ಬಾರಕೂರು ಕಲ್ಬರಹದಲ್ಲಿ "ದೇವರು ಸಾವಂತನ ಕಂಬಳ ಗದ್ದೆಯ ಮೇಲೆ" ಎಂದು ಕಂಬಳಗದ್ದೆಯನ್ನು ಹೇಳಲಾಗಿದೆ.

3) ಕ್ರಿ. ಶ. 1424ರ ಬಾರಕೂರು ಕಲ್ಬರಹದಲ್ಲಿ "ಹೊತ್ತಾಗಿ ಮಾಡಿದ ಕಂಬಳ ಗದ್ದೆ" ಎಂದಿದೆ.

4) ಕ್ರಿ. ಶ. 1437ರ ಉಡುಪಿ ಕಲ್ಬರಹವು "ಮೂಲವಾಗಿ ಕೊಡಬಾಳು ಕಂಬಳ ಗದ್ದೆ ಕೊಯಿಲ್ ಹದಿನಾರು" ಎಂದಿದೆ.

5) ಕ್ರಿ. ಶ. 1482ರ ಕೊಲ್ಲೂರು ಕಲ್ಬರಹದಲ್ಲಿ "ಅವರಿಗೆ ಒಬ್ಬ ಬಾಳು ಕಂಬಳ ಗದ್ದೆ" ಎಂದು ಹೇಳಲಾಗಿದೆ.

6) ಕ್ರಿ. ಶ. 1521ರ ಬಾರಕೂರು ಕಲ್ಬರಹದಲ್ಲಿ ಕಂಬಳ ಗದ್ದೆಯಲಿ ನಡುಹುಣಿ" ಎಂದು ಹೇಳಲಾಗಿದೆ.

7) ಕ್ರಿ. ಶ. 1676ರ ಸುಬ್ರಹ್ಮಣ್ಯದ ಕಲ್ಲುಮಾಣೆರು ಶಂಕರದೇವಿ ಬಲ್ಲಾಳ್ತಿಯ ಹೆಸರಿನಲ್ಲಿರುವ ಕಲ್ಬರಹದಲ್ಲಿ "ನನ್ನ ಕಂಬಲ ಗದ್ದೆಯಿಂದ ನಡೆಸಬಹುದು" ಎಂಬಲ್ಲಿ ಕಂಬಳಗದ್ದೆಯ ಬಗ್ಗೆ ಹೇಳಲಾಗಿದೆ.

8) ಕಂಬಳ ಪದದ ನಿಶ್ಪತ್ತಿ (ಶಬ್ದದ ರೂಪಸಿದ್ದಿ) ಕಂಪ ಎಂಬುದಕ್ಕೆ ಕೆಸರು ಎಂಬ ಹುರುಳಿದೆ. ಆದ್ದರಿಂದ ಕಂಪ+ಪೊಲ>ಕಂಬುಲ ಆಯಿತು ಎಂದು ನಂಬಿಕೆಯಿದೆ, ಕಳ ಎಂಬುದಕ್ಕೆ ಸ್ಪರ್ದೆಯ ವೇದಿಕೆ, ಕಣ ಎಂಬ ಹುರುಳಿರುವುದರಿಂದ ಕಂಪದ ಕಳ>ಕಂಬಳ ಆಗಿರಬಹುದು ಎಂದೂ ನಂಬಿಕಕೆಯಿದೆ. ಕಂಬಳ ಗದ್ದೆಯಲ್ಲಿ ಕೊನೆಗೆ 'ಪೂಕರೆ' ಎಂಬ ಕಂಬವನ್ನು ನೆಡುವುದರಿಂದ ಕಂಬದ ಕಳ>ಕಂಬಳ ಆಗಿರಬಹುದು ಎಂಬ ನಂಬಿಕೆಯೂ ಇದೆ. ಸಾಮಾನ್ಯವಾಗಿ ಗದ್ದೆಗಳ ಸಾಲಿನಲ್ಲಿ ಕೊನೆಯದಾದ, ಅತ್ಯಂತ ಕೆಳಗಿನ ಗದ್ದೆಗೆ ತುಳುವಿನಲ್ಲಿ ಕಂಬಳ ಎನ್ನುತ್ತಾರೆ. ಕೊನೆಯಲ್ಲಿರುವ ಗದ್ದೆಯಾದ ಕಾರಣ ಇದರಲ್ಲಿ ಸಾಮಾನ್ಯವಾಗಿ ಕೆಸರು ಜಾಸ್ತಿ. ಆದ್ದರಿಂದ ತುಳುವಿನಲ್ಲಿ ಕಂಪದ ಕಂಡ (ತುಳುವಿನಲ್ಲಿ ಗದ್ದೆಗೆ ಕಂಡ ಎನ್ನುತ್ತಾರೆ) ಕಂಬಳ ಆಗಿರಬಹುದು. ನುಡಿಯರಿಮೆಯ ಕಣ್ಣಿನಿಂದ ನೋಡಿದಾಗ ಳ>ಡ ಗಳು ಹಲವೆಡೆ ಪರಸ್ಪರ ಬದಲಾಗಿರುವುದು ಕಂಡುಬರುತ್ತದೆ. ಎತ್ತುಗೆಗೆ: ಇಡಾ>ಇಳಾ, ಮಾಡ>ಮಾಳ ತುಳು-ಕನ್ನಡದಲ್ಲಿ, ಉದಾ: ಕುಂಬಳ>ಕುಂಬುಡ, ಕೆಂಪು ಕುಂಬಳ>ಕೆಂಬುಡೆ. ಅದೇ ರೀತಿ ಎರಡನೇ ಪದದ ಮೊದಲ ಅಕ್ಕರ, 'ಕ' ಲುಪ್ತವಾಗುವುದು ಕೂಡ ಸಾಮಾನ್ಯ. ಉದಾ: ಗೆಜ್ಜೆ+ಕತ್ತಿ>ಗೆಜ್ಜೆತ್ತಿ. ಆದ್ದರಿಂದ ಕಂಪಕಂಡ>ಕಂಬಡ>ಕಂಬಳ ಎಂಬ ನಿಶ್ಪತ್ತಿ ಹೆಚ್ಚು ಹೊಂದುತ್ತದೆ ಎನ್ನಬಹುದು.

9) ಕಂಬಳದ ಹೆಚ್ಚುಗಾರಿಕೆ ಕರ್ನಾಟಕದ ಕರಾವಳಿಯಲ್ಲಿ ಕಂಬಳ ಎನ್ನುವುದು ಗನತೆಯ ವಿಚಾರವಾಗಿತ್ತು. ಅರಸರು ನಡೆಸಲೇ ಬೇಕಾದ ಆಚರಣೆಯಾಗಿತ್ತು. ಕಂಬಳಕ್ಕೆ ಸಂಬಂದಿಸಿದಂತೆ ಅನೇಕ ಹೋರಾಟಗಳು ನಡೆದಿವೆ ಎಂದು ಹಳಮೆಗಳಿಂದ ತಿಳಿದುಬರುತ್ತದೆ. ಸಾಮಾನ್ಯವಾಗಿ 'ಕಂಬಳ' ಎಂದರೆ 'ಕೋಣಗಳ ಓಟದ ಸ್ಪರ್ದೆ' ಎಂದು ಜನರು ಬಾವಿಸುತ್ತಾರೆ. ಆದರೆ ಕಂಬಳ ಎಂದರೆ ಕೇವಲ ಕೋಣಗಳ ಓಟದ ಸ್ಪರ್ದೆಯಲ್ಲ ಕೇವಲ ಕೋಣಗಳ ಓಟದ ಪಯ್ಪೋಟಿ ಮಾತ್ರ ಅದಾಗಿದ್ದರೆ ಕಂಬಳಕ್ಕೆ ಇಶ್ಟು ಹೆಚ್ಚುಗಾರಿಕೆ ಇರುತ್ತಿರಲಿಲ್ಲ. ಕಂಬಳಕ್ಕೆ ಸಂಬಂದಿಸಿದಂತೆ ಹೋರಾಡುವ ಅಗತ್ಯವೂ ಇರುತ್ತಿರಲಿಲ್ಲ.
ಕಂಬಳ ಒಂದು ವಿಶಿಶ್ಟ ಜನಪದ ಆಚರಣೆ. ಈ ಬಗ್ಗೆ, "ಕಂಬಳ ಕೇವಲ ಓಟದ ಕೋಣಗಳ ಸ್ಪರ್ದೆಯೂ ಅಲ್ಲ. ಜನಪದರ ಮನೋರಂಜನೆಯ ಸಾಮಾಗ್ರಿಯೂ ಅಲ್ಲ. ಬದಲಾಗಿ ಸಾಮಾಜಿಕ, ಹಣಕಾಸಿನ, ರಾಜಕೀಯ ಆಯಾಮವುಳ್ಳ ಪಲವಂತಿಕೆಯ ಆಚರಣೆ ಎಂಬುದು ಕಚಿತವಾಗುತ್ತದೆ" ಎಂಬುದು ಜನರ ನಂಬಿಕೆ.

10) ಮವ್ಕಿಕ ಪರಂಪರೆ ಹಾಗೂ ಹಳಮೆಗಳು ಅನೇಕ ತುಳು ಪಾಡ್ದನಗಳಲ್ಲಿ ಕೂಡ ಕಂಬಳದ ಬಗ್ಗೆ ಹೇಳಲಾಗಿದೆ. ಕಂಬಳಕ್ಕೆ ಸಂಬಂದಿಸಿದಂತೆ 'ಈಜೋ ಮಂಜೊಟ್ಟಿಗೋಣ'ವೆಂಬ ಪಾಡ್ದನ ಕರ್ನಾಟಕದ ಕರಾವಳಿಯಲ್ಲಿ ಹಬ್ಬಿದೆ. ಬಲಿಯೇಂದ್ರ ಪಾಡ್ದನದಲ್ಲಿಯೂ

ಕಂಬಳದ ಬಗ್ಗೆ ಹೇಳಲಾಗಿದೆ. ದೂಮಾವತಿ ದಯ್ಯದ ಪಾಡ್ದನದಲ್ಲಿ 'ಗಿಡಾವು ಗೋಣ ಕಂಜಿಲು' ಎಂದು ಕಂಬಳದಲ್ಲಿ ಓಡಿಸುವ ಕೋಣಗಳ ಬಗ್ಗೆ ವಿವರಣೆ ಇದೆ. ಕೋಟಿ-ಚೆನ್ನಯ ಮತ್ತು ಮಂತ್ರಿ ಬುದ್ಯಂತನ ನಡುವೆ ದ್ವೇಶ ಬೆಳೆಯಲು ಕಂಬಳ ಆಚರಣೆಯ ವಿವಾದವೇ ಮೂಲಕಾರಣ ಆಗಿರುವುದನ್ನು ಕೋಟಿ-ಚೆನ್ನಯ್ಯ ಪಾಡ್ದನ ತಿಳಿಸುತ್ತದೆ. ಕಾಸರಗೋಡಿನ ಪುಳ್ಕೂರು ಬಾಚ ಎಂಬ ಜಟ್ಟಿ ಕಂಬಳ ಕೋಣಗಳೊಂದಿಗೆ ಒಬ್ಬಂಟಿಯಾಗಿ ಹೋರಾಡಿ, ಕೋಣಗಳನ್ನು ಹಿಡಿತಕ್ಕೆ ತೆಗೆದುಕೊಂಡು ಜನರನ್ನು ಕಾಪಾಡಿದನೆಂಬ ಕತೆ ಕೇಳಿಬರುತ್ತದೆ. ಕಾಂತಾಬಾರೆ-ಬೂದಾಬಾರೆ ಎಂಬ ವೀರರು ಕಟಪಾಡಿ ಕಂಬಳವನ್ನು ಕಾಲಿನಿಂದ ಒದ್ದು ಅಂಕುಡೊಂಕುಗೊಳಿಸಿದರೆಂಬ ಸ್ಥಳೀಯ ಹಳಮೆಯಿದೆ.

ಪೂಕರೆ ಕಂಬದ ವಿಚಾರದಲ್ಲಿ ಯುದ್ದವಾಗುತ್ತಿದ್ದಿರುವಂತೆ ತೋರುತ್ತದೆ. ದಂಡಿಗೆ ಹೋದ ಒಡೆಯರು ಗೆದ್ದು ಬರುವಾಗ ಪೂಕರೆ ಕಂಬವನ್ನು ತಂದರೆಂದು ಹೇಳುವ ಉರಲ್ ಒಂದನ್ನು ಹಳಮೆಗಾರ **ಸುಂದರ ಕೇನಾಜೆ**ಯವರು ಸಂಗ್ರಹಿಸಿದ್ದಾರೆ.

ಉರಲ್ (ತುಳು)
ನಮೊನ ಉಲ್ಲಾಯ ದಂಡ್‌ಗು ಪೋತೆರ್
ದಂಡ್‌ಡ್ದ್ ಬನ್ನಗ ಗಿಂಡೆದ ನೀರು
ಕುಡ್ಪುಡು ಕಾಯಿ
ಬಟ್ಟಲ್ಡ್ ಪೇರು
ಕೊರ್ಯೆಡ್ ಸುಣ್ಣೋ
ಬಂಡಿಡ್ ಪೂಕರೆ
ಕೊಂಡೊದು ಬರ್ಪರೆ ಉಲ್ಲಾಯೆ
ಆಯೆರ್ಗ್ ಪೋನಗ ಆಜಿಕಟ್ಟು ಬಡು
ಈಯೆರೆಗ್ ಬನ್ನಗ ಮೂಜಿಕಟ್ಟು ಬಡು
ಕಂಪಕಂಡೊಡು ಗುಂಪು ಬಲಿಪಡ
ಪೊಯ್ಯಕಂಡೊಡು ಪೊಯ್ಯ ಬಲಿಪಡ
ಮೆಲ್ಲಪೋ ಮೆಲ್ಲ ಬಲ
ಓ ... ಓ ... ಓ...

ಕನ್ನಡ ಅನುವಾದ,
ನಮ್ಮ ಯಜಮಾನರು ದಂಡಿಗೆ ಹೋಗಿದ್ದಾರೆ
ದಂಡಿನಿಂದ ಬರುವಾಗ ಗಿಂಡೆಯಲ್ಲಿ ನೀರು
ಎಸರು ತಟ್ಟೆಯಲ್ಲಿ ಕಾಯಿ
ಬಟ್ಟಲಿನಲ್ಲಿ ಹಾಲು
ಮರಿಗೆಯಲ್ಲಿ ಸುಣ್ಣ
ಬಂಡಿಯಲ್ಲಿ ಪೂಕರೆ
ತೆಗೆದುಕೊಂಡು ಬರುತ್ತಾರೆ
ಆ ಕಡೆ ಹೋಗುವಾಗ ಆರು ಕಟ್ಟು ಬೆತ್ತ
ಈ ಕಡೆ ಬರುವಾಗ ಮೂರು ಕಟ್ಟು ಬೆತ್ತ
ಕೆಸರುಗದ್ದೆಯಲ್ಲಿ ಗುಂಪು ಓಡಬೇಡ

ಹೊಯ್ಗೆ ಗದ್ದೆಯಲ್ಲಿ ಹೊಯ್ಯೋ ಓಡಬೇಡ
ಮೆಲ್ಲಗೆ ಹೋಗು ಮೆಲ್ಲಗೆ ಬಾ
ಓ …. ಓ …. ಓ ….

ಒಡೆಯನ ಅಂತಸ್ತಿಗೆ ಅನುಗುಣವಾಗಿ ಗಣೆ ಹಾಕುವುದು ಕೂಡ ಪೂಕರೆ ಒಡೆತನದ ಸೂಚಕವಾಗಿದೆ ಎಂಬುದನ್ನು ತಿಳಿಸುತ್ತದೆ. ಪಣಂಬೂರಿನ ಪೂಕರೆ ಕಂಬಳ ತರಲು ಮುಲ್ಕಿಯಿಂದ ಹೋದ ಪ್ರಸಂಗ ಹಾಗೂ ಮಂಜಣ್ಣ ಪೂಕರೆ ಕಂಬವನ್ನು ಕಿತ್ತು ತಂದ ಹಳಮೆಯು 'ಅಗೋಳಿ ಮಂಜಣ್ಣ' ಎಂಬ ಹೆಸರಿನಲ್ಲಿ ಪ್ರಚಲಿತವಿದೆ. ಪೇರೂರಿನಲ್ಲಿ ಪೂಕರೆ ಕಂಬ ಕಳೆದುಹೋದ ಮೇಲೆ ಪೂಕರೆ ಕಂಬ ಹಾಕುವ ಆಚರಣೆ ನಿಂತುಹೋಯಿತು ಎಂಬ ಹಳಮೆಯಿದೆ. ಕೋಳ್ಯೂರು ಮತ್ತು ಕಳಿಯೂರು, ಕಾಸರಗೋಡು ಜಿಲ್ಲೆಯ ಅಕ್ಕಪಕ್ಕದ ಎರಡು ಹಳ್ಳಿಗಳು. ಕಳಿಯೂರಿನಲ್ಲಿ ಪೂಕರೆ ಕಂಬಳವೂ, ಕೋಳ್ಯೂರಿನಲ್ಲಿ ಬಾಳೆ ಕಂಬಳವೂ ನಡೆಯುತ್ತಿತ್ತು. ಒಂದು ವರುಶ ಕೋಳ್ಯೂರು ಕಂಬಳದಲ್ಲಿ ಮೂಲದ ಮಾಣಿ ಕೋಣಗಳನ್ನು ಅಡ್ಡಕ್ಕೆ ಓಡಿಸುವ ಬದಲು ನೀಟಕ್ಕೆ ಓಡಿಸುತ್ತಾನೆ. ಆಗ ಕೋಣಗಳು ಅಲ್ಲಿಯೇ ಮಾಯವಾಗುತ್ತವೆ. ಮೂಲದ ಮಾಣಿ ಓಡಿ ಹೋಗಿ ಗದ್ದೆಯ ಬದಿಯ ತೊರೆಗೆ ಹಾರುತ್ತಾನೆ. ಆ ಜಾಗಕ್ಕೆ 'ರೆಂಜೆಗುಂಡಿ' ಎನ್ನುತ್ತಾರೆ. ಓಡುವಾಗ ಆತನ ಮುಟ್ಟಾಳೆ ಒಂದು ಕಡೆ ಬೀಳುತ್ತದೆ. ಆ ಜಾಗವನ್ನು ಮುಟ್ಟಾಳೆಕಲ್ಲು ಎನ್ನುತ್ತಾರೆ. ಕೋಣಗಳು ಮಾಯವಾದ ಜಾಗ ಎಂಬಲ್ಲಿ ಕೋಣಗಳು ಮಲಗಿರುವಂತೆ ಕಾಣುವ ಎರಡು ಬಂಡೆಗಲ್ಲುಗಳಿವೆ. ಈ ಕಲ್ಲನ್ನು ಎರುಮಾಜಿನಕಲ್ಲು (ಕೋಣ ಮಾಯವಾದ ಕಲ್ಲು) ಎನ್ನುತ್ತಾರೆ.

ಕಂಬಳ ಸಂಬಂದಿ ಈ ಜೋಮಂಜೊಟ್ಟೆಗೋಣ ಪಾಡ್ದನವು ಸತ್ಯದ ಕಂಬಳಕ್ಕೆ ಇಳಿದ ರೆಂಜಲಡಿಬರಿಕೆಯ ಮೂಲದ ಮಾನಿ ಬಬ್ಬು ಹಾಗೂ ಕೋಣಗಳು ಮಾಯವಾದಕತೆಯನ್ನು ಹೇಳುತ್ತವೆ. ಹೀಗೆ ಕೋಣಗಳು ಮಾಯವಾದ ಮರುದಿವಸ ನೋಡುವಾಗ ಕಳಿಯೂರಿನ ಪೂಕರೆ ಕಂಬ ಕೋಳ್ಯೂರು ಕಂಬಳಗದ್ದೆಯಲ್ಲಿ ಬಂದು ಬಿದ್ದಿತ್ತು. ಅಂದಿನಿಂದ ಕೋಳ್ಯೂರು ಕಂಬಳಗದ್ದೆಯಲ್ಲಿ ಬಾಳೆ ಹಾಗೂ ಪೂಕರೆ ಕಂಬ ಎರಡೂ ಹಾಕುವ ಪದ್ದತಿ ಬಂತು ಎಂಬ ಹಳಮೆಯಿದೆ. ಅಂದಿನಿಂದ ಕೋಳ್ಯೂರು ಕಂಬಳದಂದು ಗದ್ದೆಗೆ ಕೋಣಗಳನ್ನು ಇಳಿಸುವುದಿಲ್ಲ. ಬದಲಿಗೆ ಎತ್ತುಗಳನ್ನು ಇಳಿಸುತ್ತಾರೆ. ಕೊಕ್ಕಡ ಕಂಬಳಕ್ಕೆ ಸೆಗಣಿ ಹಾಕಬಾರದು ಎಂದಿದೆ. ಅರಿಬಯ್ಲು ಕಂಬಳ ಗದ್ದೆಯಲ್ಲಿ ಜೊಳ್ಳು ಬತ್ತ ಬಿತ್ತಿದರೂ ಬೆಳೆ ಬೆಳೆಯುತ್ತದೆ ಎಂಬ ನಂಬಿಕೆ ಇದೆ. ವಂಡಾರು ಕಂಬಳ ಗದ್ದೆಯ ಸುತ್ತ ಬದುವಿನ ಸುತ್ತ ಬೆಳ್ತಿಗೆ ಅಕ್ಕಿ ಉದುರಿಸಿದರೆ ಮಕ್ಕಳಾಗುತ್ತವೆ ಎಂಬ ನಂಬಿಕೆ ಇದೆ. ವಂಡಾರು ಕಂಬಳದ ದಿನ ಕೋಟೇಶ್ವರದ ನೀರು ಕೆಂಪಗಾಗುತ್ತಿತ್ತು ಎಂಬ ಸ್ತಳ ಹಳಮೆಯಿದೆ. ಕಂಬಳದ ಆಚರಣೆಯಲ್ಲಿ ಮೂರು ಮುಕ್ಯ ಅಂಶಗಳಿವೆ. ಮೊದಲನೆಯದು ಕೋಣಗಳ ಓಟದ ಪಯ್ಪೋಟಿಗೆ ಸಂಬಂದಿಸಿದ ಅಂಶ. ಎರಡನೆಯದು ಪಲವಂತಿಕೆಯ ಆಚರಣೆಗೆ ಸಂಬಂದಿಸಿದೆ. ಮೂರನೆಯದು ನಾಗ ಹಾಗೂ ಇತರ ದಯ್ವಗಳ ಆರಾದನೆಗೆ ಸಂಬಂದಿಸಿದೆ. ಹೀಗೆ ತನ್ನದೇ ಆದ ಹಿನ್ನಲೆ, ಹಿರಿಮೆ, ಹಾಗೂ ಮೇಲ್ತನವನ್ನು ಹೊಂದಿರುವ ಈ ಸಾಂಸ್ಕ್ರುತಿಕ ಆಟ ಕಂಬಳವು ವಿಶ್ವದೆಲ್ಲೆಡೆ ಹರಡಿ ಕರುನಾಡಿನ ಸಂಸ್ಕ್ರುತಿ ಇನ್ನೂ ಹೆಚ್ಚಾಗಿ ಹಬ್ಬಿ ಕರುನಾಡ ಕಂಪು ಎಲ್ಲೆಡೆ ಸೂಸಲಿ ಎಂದು ಬಯಸುತ್ತೇನೆ.

***(ಮಾಹಿತಿ ಸೆಲೆ: [Wikipedia](Wikipedia))***
***(ಚಿತ್ರ ಸೆಲೆ: [Wikipedia](Wikipedia) )***